ಇನ್ನುಳಿದ 17 ಪ್ರಕರಣಗಳಲ್ಲಿ 8 ಜನರಿಗೆ ದಸ್ತಗಿರಿ ಮಾಡಲಾಗಿದೆ. NP ಈ ಕ್ಷೇತ್ರದಲ್ಲಿ ದಲಿತರ ರಕ್ಷಣೆಗಾಗಿ ಬೇಕಾದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ಅವರ ಮೇಲೆ ಯಾವುದೇ ರೀತಿಯ ದೌರ್ಜನ್ಯಗಳು ನಡೆಯದಂತೆ ಕಟ್ಟೆಚ್ಚರ ವಹಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಡಿ.ಸಿ. ಮತ್ತು ಎಸ್.ಪಿ.ಯವರಿಗೆ ಕ್ಷಣ ಕ್ಷಣಕ್ಕೆ ಅಲ್ಲಿನ ಅಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಂಡು, ಅವರಿಗೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಬೇಕೆಂದು ನಿರ್ದೇಶನವನ್ನು ಸರ್ಕಾರ ಕೊಟ್ಟಿದೆ. ಅಲ್ಲಿ ಯಾವುದೇ ರೀತಿಯಲ್ಲಿ ಹೆಚ್ಚು ಕಡಿಮೆಯಾದರೆ ಕೂಡಲೇ ಕ್ರಮ ತೆಗೆದುಕೊಂಡು ಶಾಂತ ವಾತಾವರಣ ನಿರ್ಮಾಣ ಮಾಡಲು ಎಲ್ಲಾ ರೀತಿಯಿಂದಲೂ ಸರ್ಕಾರ ಕ್ರಮ ತೆಗೆದುಕೊಂಡಿದೆ.

12. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2007 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್.ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಹಾಗೂ ವಿಧಾನ ಸಭೆ ಪರಿಶೀಲನಾ ಸಮಿತಿಯು ಮಾರ್ಪಡಿಸಿದ ರೀತ್ಯಾ ವಿಧೇಯಕವನ್ನು ಪರಿಶೀಲಿಸಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಗಳೊಂದಿಗೆ ಅಂಗೀಕರಿಸಲ್ಪಟ್ಟ 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು.

ಶ್ರೀ ಬಿ.ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಇದು ಹಿಂದೆ ವಿಧಾನಸಭೆಯಲ್ಲಿ ಪಾಸ್ ಆಗಿತ್ತು. ರಾಜ್ಯದಲ್ಲಿನ ಶಿಕ್ಷಕರ ವರ್ಗಾವಣೆ ಬಗ್ಗೆ ಒಂದು ನಿರ್ದಿಷ್ಟವಾದ ಸಲಹೆ ಸೂಚನೆಗಳನ್ನು ಕೊಡಲಾಗಿದೆ. ಹಿಂದೆ ನಿರ್ದಿಷ್ಟವಾದ ಕಾನೂನು ಇರಲಿಲ್ಲ. ಹಿಂದಿನ ಸರ್ಕಾರ, ತಾವೂ ಕೂಡ ಇದಕ್ಕೊಂದು ಕಾನೂನು

ಮಾಡಬೇಕೆಂದು ಸಲಹೆಯನ್ನು ಕೊಟ್ಟಿತ್ತು. ಆ ಕಾನೂನನ್ನು ಮಾಡಿ ಇಲ್ಲಿ ಪಾಸ್ ಆಗಿತ್ತು. ವಿಧಾನ ಪರಿಷತ್ತಿಗೆ ಹೋದಾಗ ಕೆಲವು ತಿದ್ದುಪಡಿಗಳನ್ನು ಕೊಟ್ಟಿದ್ದರು. ಆ ತಿದ್ದುಪಡಿ ಎಂದರೆ, ಪರಸ್ಪರ ವರ್ಗಾವಣೆಗೆ ಅನುಮತಿಯನ್ನು ಕೊಡಬೇಕು ಮತ್ತು ಹೆಣ್ಣು ಮಕ್ಕಳು ಯಾರಾದರು ಕೆಲಸ ಮಾಡುತ್ತಿದ್ದರೆ, ಅವರು ನೌಕರಿ ಮಾಡಿದ್ದು ಪ್ರೊಬೆಷನರಿ ಪರೀಯಸ್ ಮುಗಿದು ಒಂದು ವರ್ಷದ ನಂತರ, ಎಲ್ಲಿ ಅವರ ಪತಿ ಇರುತ್ತಾರೆ ಅಲ್ಲಿಗೆ ವರ್ಗಾವಣೆ ಮಾಡಬೇಕೆಂಬುದು ಒಂದು. ಇನ್ನು ಅನಾರೋಗ್ಯದಿಂದ, ಕ್ಯಾನ್ಸರ್ ಇಂಥ ರೋಗದಿಂದ ತೊಂದರೆಯಾಗಿದ್ದರೆ, ಅಂತಹವರಿಗೆ ಜಿಲ್ಲಾ ಆರೋಗ್ಯಾಧಿಕಾರಿಯಿಂದ ಪ್ರಮಾಣ ಪತ್ರವನ್ನು ಪಡೆದವರನ್ನು ಎಲ್ಲಿ ಅವರಿಗೆ ಅನುಕೂಲವಿರುತ್ತದೆ ಅಲ್ಲಿಗೆ ವರ್ಗಾವಣೆ ಮಾಡುವುದಕ್ಕೆ ಹಾಗೂ ಹುಬ್ಬಳ್ಳಿಯಲ್ಲಿ 15 ವರ್ಷ ಕೆಲಸ ಮಾಡಿ ಬಡ್ತಿಯಾಗಿದ್ದರೆ ಆ ಸೇವೆಯನ್ನು ಪರಿಗಣಿಸಿ ಅವರನ್ನು 'ಎ' ಮತ್ತು 'ಬಿ' ಜೋನ್‌ಗೆ ಹಾಕಬೇಕೆಂಬ ಇಂಥ ಸಲಹೆಗಳನ್ನು ಆ ಸಮಿತಿ ಕೊಟ್ಟಿದ್ದರು. ಸಮಿತಿಯ ಎಲ್ಲಾ ಸಲಹೆಗಳನ್ನು ಒಪ್ಪಿಕೊಂಡು ಅದರಲ್ಲಿ ಸೇರಿಸಲಾಗಿದೆ. ಈ ನಿಯಮಗಳನ್ನು ತಪ್ಪಿಸಿದಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ವಿಭಾಗಮಟ್ಟದಲ್ಲಿ ಒಂದು ಓಂಬುಡ್ಸಮನ್ ಕಮಿಟಿ ಮಾಡಲಾಗಿದೆ, ಮತ್ತೆ ಎಲ್ಲಾ ಕೌನ್ಸಿಲ್ ಮೂಲಕ ಮಾಡುವ ವ್ಯವಸ್ಥೆಯನ್ನು ಮಾಡಿದೆ. ಇದಾದ ನಂತರ 4,364 ಮತ್ತು 8,000 ಜನ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು 6,000 ಜನ ಹೈಸ್ಕೂಲ್ ಶಿಕ್ಷಕರು, 600 ಜನ ಜೂನಿಯರ್ ಕಾಲೇಜು ಉಪನ್ಯಾಸಕರನ್ನು ಒಟ್ಟು 19,500 ಶಿಕ್ಷಕರು ನೇಮಕ ಹೊಂದಿ ಪ್ರತಿಯೊಬ್ಬರೂ ಹಳ್ಳಿಯಲ್ಲಿ ಕೆಲಸ ಮಾಡುತ್ತಾರೆ. ಯಾವುದೇ ತಕರಾರು ಬಂದಿಲ್ಲ, ಇದನ್ನು ಬಹಳ ಒಳ್ಳೆಯ ರೀತಿಯಲ್ಲಿ ಮಾಡಿದ್ದೇವೆ, ಹಾಗಾಗಿ ಕೌನ್ಸಲ್‌ನಲ್ಲಿ ಏನು ತಿದ್ದುಪಡಿಯನ್ನು ಮಾಡಿದರೋ ಅವನ್ನೆಲ್ಲಾ ಒಪ್ಪಿಕೊಂಡಿದ್ದೇವೆ. ವಿಧಾನ ಸಭೆಯ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅವನ್ನೆಲ್ಲಾ ಸೇರಿಸಿದ್ದೇವೆ. ಅದಕ್ಕೆ ಇವತ್ತು ಒಂದು ಉದಾಹರಣೆಯನ್ನು ಹೇಳುವುದಾದರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ ಇತ್ತು. ಇಡೀ ಜಿಲ್ಲೆಯಲಿ ಬೇರೆ ಜಿಲ್ಲೆಯಿಂದ ಶಿಕ್ಷಕರನ್ನು ವರ್ಗಾವಣೆ ಮಾಡಲು ಒಂದು ಪೋಸ್ಟ್ ಖಾಲಿ ಇಲ್ಲ, ಎಲ್ಲವನ್ನೂ ತುಂಬಲಾಗಿದೆ. ಹೀಗಾಗಿ ಇದೊಂದು ಉತ್ತಮವಾದ ಕಾನೂನನ್ನು ತರಲಾಗಿದೆ ದಯಮಾಡಿ,

ಇದಕ್ಕೆ ಸದನ ಅನುಮತಿಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಶಿಕ್ಷಣ ಇಲಾಖೆಯಲ್ಲಿ ಬಹಳಷ್ಟು ಗೊಂದಲ ನಡೆಯುತ್ತಿದೆ, ಮತ್ತೆ ವಿಶೇಷವಾಗಿ ಹಳ್ಳಿಯಲ್ಲಿರುವ ಶಾಲೆಗಳಲ್ಲಿ ಶಿಕ್ಷಕರಿಲ್ಲವೆನ್ನುವ ಆಪಾದನೆಯೂ ಇದೆ. ಈ ಬಗ್ಗೆ ಎರಡೂ ಸದನಗಳಲ್ಲಿ ಬಹಳಷ್ಟೂ ದೀರ್ಘವಾದ ಚರ್ಚೆ ನಡೆದಿದೆ. ಇವತ್ತು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಇಂಥ ಒಂದು ಅನಾಹುತವನ್ನು ತಪ್ಪಿಸುವುದಕ್ಕೆ ತಾವು ಒಂದು ವರದಿಯನ್ನು ತರಿಸಿ. ಈಗಾಗಲೇ ಇದನ್ನು ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡಿದ್ದಾರೆ, ಅದಕ್ಕೆ ಒಪ್ಪಿದ್ದಾರೆನ್ನುವ ಮಾತನ್ನು ಕೂಡ ತಾವು ಹೇಳಿದ್ದೀರಿ. ಇವತ್ತು ತಮ್ಮ ಮೇಲೆ ಬಹಳಷ್ಟು ಜವಾಬ್ದಾರಿ ಇದೆ. ರಾಜ್ಯದಲ್ಲಿರುವ ಬಡ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಹಳ್ಳಿಗಳಲ್ಲಿ ಏನು ಬಡ ಮಕ್ಕಳಿದ್ದಾರೆ, ಅಲ್ಲಿಗೆ ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರುಗಳೇ ಹೋಗುವುದಿಲ್ಲ. ನನ್ನ ಅನುಭವದ ಮಾತುಗಳನ್ನು ಹೇಳುತ್ತಿದ್ದೇನೆ. ಯಾವುದೋ ಸಣ್ಣಪುಟ್ಟ ಮಾತುಗಳನ್ನು ತಮ್ಮ ಗಮನಕ್ಕೆ ತರುತ್ತಿಲ್ಲ. ತಾವು ಬಹಳಷ್ಟು ಕಡೆಗಳಿಗೆ ಹೋಗಿದ್ದೀರಿ, ಮೊನ್ನೆ ಗುಲ್ಬರ್ಗಾ ಜಿಲ್ಲೆಗೆ ಬಂದಿದ್ದೀರಿ. ಮೂರು ದಿವಸಗಳ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡು ಯಾದ್ಗೀರ್‌ಗೆ ಹೋದಿರಿ, ರಾಯಚೂರಿಗೆ ಹೋದಿರಿ, ಎಲ್ಲಾ ಕಡೆಗಳಿಗೂ ಪ್ರವಾಸ ಹಮ್ಮಿಕೊಂಡಿದ್ದೀರಿ. ನಮ್ಮ ಅನುಭವದ ಹಿನ್ನೆಲೆಯಲ್ಲಿ 18 ತಿಂಗಳುಗಳ ಕಾಲ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದೀರಿ. ಇವತ್ತು ಬಹಳಷ್ಟು ವಿಷಯಗಳ ಬಗ್ಗೆ ಇದೇನು ತಿದ್ದುಪಡಿ ತಂದಿದ್ದೀರಿ, ತಿದ್ದುಪಡಿಯಿಂದ ಜನರಿಗೆ ಸ್ವಲ್ಪವಾದರೂ ಸಮಾಧಾನವಾಗಬೇಕು. ಇವತ್ತು ತಿದ್ದುಪಡಿ ಮಸೂದೆಗೆ ನಮ್ಮೆಲ್ಲರ ಒಪ್ಪಿಗೆ ಪಡೆದಿದ್ದೀರಿ. ನಾಳೆ ನಮ್ಮನ್ನು ಕೇಳುತ್ತಾರೆ. ಏನು ಮಾಡಿದಿರಿ? ಅವರು ತಂದಿದ್ದನ್ನು ಒಪ್ಪಿ ಬಿಟ್ಟಿದ್ದೀರಿ, ಏನು ನಡೆಯುತ್ತಿದೆ ಎಂದು ಕೇಳುತ್ತಾರೆ. ಅದಕ್ಕೋಸ್ಕರ, ತಿದ್ದುಪಡಿಯಿಂದ ನಿಜವಾದ ರೀತಿಯಲ್ಲಿ ಶಿಕ್ಷಣ ಇಲಾಖೆಯಿಂದ ಸಾಕಷ್ಟು ಸಾರ್ವಜನಿಕರಿಗೆ ಸುಧಾರಣೆಯಾಗಿದೆ ಎನ್ನತಕ್ಕಂಥ ವಿಶ್ವಾಸವನ್ನು ಮೂಡಿಸುವ ರೀತಿಯಲ್ಲಿ ಕೆಲಸವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಈ ಮನೆಯಲ್ಲಿ ಏನು ಬಿಲ್ ಪಾಸ್ ಆಗಿತ್ತು ಅದಕ್ಕೆ ಕೌನ್ಸಿಲ್‌ನವರು ಏನು ತಿದ್ದುಪಡಿಗಳನ್ನು ಸೂಚಿಸಿದರು, ಅದರ ವಿವರಣಾ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿಲ್ಲ. ಇಲ್ಲೊಂದು ಬಿಲ್ ಅನ್ನು ನಾವು ಪಾಸ್ ಮಾಡಿ ಕಳುಹಿಸಿದೆವು ಮತ್ತು ಆವತ್ತು ನಾವೆಲ್ಲರೂ ಮಾತನಾಡಿದೆವು. ಸನ್ಮಾನ್ಯ ಸಚಿವರು ನಮಗೆ convince ಮಾಡಿದರು. ಯಾವ್ಯಾವ ಕಾರಣಕ್ಕೆ ಏನೇನು amendment ಆಗಿದೆಯೆಂಬುದು ನಮಗೆ ಗೊತ್ತಾಗದೇ ಹೋದರೆ, ನಾವು ಚರ್ಚಿಸುವುದು ಸ್ವಲ್ಪ ತಾಪತ್ರಯವಾಗುತ್ತದೆ. ಎರಡನೆಯದು, ಅಲ್ಲಿ Select Committee ಆಗಿತ್ತೆಂದು ನಮಗೆ ತಿಳಿದು ಬಂದಿದೆ. ಈ ಬಿಲ್ ಏನಾದರೂ Select Committee ಗೆ ಹೋದರೆ, ಅವರ joint Select Committeeಗೆ ಹೋಗಬೇಕೇ? ಬರೀ Council Commitee ಗೆ ಹೋಗಬೇಕೆ? ಅದನ್ನು ನಾವು chairಗೆ ಬಿಟ್ಟು ಬಿಡುತ್ತೇವೆ. If the Bill has to be amended and something has to be added, ಈ ಮನೆಯಿಂದ 3 ಜನರನ್ನೋ, 4 ಜನರನ್ನೋ ನೇಮಿಸಿ, ಆ ಸಮಿತಿ ಮಾಡಿದ್ದರೆ, ನಮಗೆ ಚರ್ಚೆಯ ಅಗತ್ಯವಿರಲಿಲ್ಲ. ಸಮಿತಿಯಲ್ಲಿರುವ ನಮ್ಮ ಸದಸ್ಯರೆಲ್ಲರೂ ಅದೆಲ್ಲವನ್ನೂ ನೋಡಿದ್ದಾರೆಂದು ನಾವು ಒಪ್ಪಬಹುದಿತ್ತು. ಸರ್, ಒಂದು SDMC ಬಗ್ಗೆ ಚರ್ಚೆಯಾದರೆ, ಆ ಮನೆಯ ಸಮಿತಿ ಹೋಗುತ್ತದೆ, ರಾಜ್ಯವನ್ನೆಲ್ಲಾ ನೋಡಿಕೊಂಡು ಬರುತ್ತದೆ. ಅದಕ್ಕೆಲ್ಲಾ amendments ಅನ್ನು propose ಮಾಡಿ ಕಳುಹಿಸುತ್ತದೆ, ಅದನ್ನು ನಾವು ಒಪ್ಪಿಕೊಳ್ಳಬೇಕು. ವಿಧಾನಸಭೆ ಹೇಳಿದ್ದನ್ನು ವಿಧಾನ ಪರಿಷತ್ತು ಒಪ್ಪಬೇಕೇ? ವಿಧಾನ ಪರಿಷತ್ತು ಹೇಳಿದ್ದನ್ನು ವಿಧಾನ ಸಭೆ ಒಪ್ಪಬೇಕೆ? ತಾವೇ ತೀರ್ಮಾನ ಮಾಡಬೇಕು.

ಅಧ್ಯಕ್ಷರು; ಅಲ್ಲಿ ಶಿಕ್ಷಕರ ಕ್ಷೇತ್ರದ ಪ್ರತಿನಿಧಿಗಳಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ; ಆಯಿತು. ಹಾಗಾದರೆ, ನಾವು ಇಲ್ಲಿ ಶಿಕ್ಷಕರುಗಳ ಬಗ್ಗೆ ಚರ್ಚೆ ಮಾಡುವುದಿಲ್ಲ. ಬೇರೆಯದನ್ನು ಅವರು ಚರ್ಚೆ ಮಾಡಬಾರದೆಂದು ತಾವು ಒಂದು ಆದೇಶ ಕಳುಹಿಸಿ ಬಿಡಿ. ಶಿಕ್ಷಕರದು, ಪದವೀಧರರದು, ಅವರು ಯಾವ್ಯಾವ ಕ್ಷೇತ್ರಗಳಲ್ಲಿ ಆಯ್ಕೆಯಾಗಿ ಬಂದಿದ್ದಾರೋ, ಅವೆಲ್ಲದರ ಬಗ್ಗೆ ನಾವು ಚರ್ಚೆ ಮಾಡುವುದೇ ಬೇಡ.

ಅದೇ ಒಂದು line draw ಮಾಡಿಬಿಡಿ ತಾವು. ಇದ್ಯಾವುದೇ ಬಿಲ್‌ಗಳನ್ನು ನೀವ್ಯಾರೂ ಪಾಸ್ ಮಾಡಬೇಕಾಗಿಲ್ಲ, ಅದು ಕೌನ್ಸಿಲ್‌ಗೆಂದೇ ಇಟ್ಟಿರುವ ಬಿಲ್ ಆಗಿದೆ, ಪಾಸ್ ಮಾಡಿ ಎಂದು ತಾವು ಒಂದು line ಅನ್ನು draw ಮಾಡಿ ಬಿಡಿ. This is contempt of this House. ಇದು ಈ ಮನೆಗೆ ಮಾಡಿರುವ ಅವಮಾನವಾಗಿದೆ. ನಮ್ಮ ಘನತೆ–ಗೌರವವನ್ನು ಕಳೆದಿರುವ ಬಿಲ್ ಇದಾಗಿದೆ. ಏತಕ್ಕೆ amend ಮಾಡಿದ್ದೀರಿ? ಏನು amend ಮಾಡಿದ್ದೀರಿ? ಏಂಬುದನ್ನು ಸೌಜನ್ಯಕ್ಕೂ ನಮ್ಮ ಮುಂದೆ ಹೇಳುತ್ತಿಲ್ಲ. ಮತ್ತೆ ಯಾರ್ಯಾರು, ಏನೇನು ಮಾತನಾಡಿದಿರಿ, Select Committee ಮುಂದೆ ಏನು issues ಇತ್ತು, ಏನು ತಿರ್ಮಾನವಾಗಿದೆ, ಇವತ್ತು ಅದ್ಯಾವುದು ನಮ್ಮ ಮುಂದಿಲ್ಲ. ಅವರು ಕಳುಹಿಸಿರುವ ಬಿಲ್ ಅನ್ನು ಪಾಸ್ ಮಾಡುವುದಕ್ಕೆ ಸಂವಿಧಾನದಲ್ಲಿ ಈ ವಿಧಾನಸಭೆ ರಚನೆಯಾಗಿದೆಯೇ? No, it can never happen. ದಯಮಾಡಿ ಇದನ್ನೆಲ್ಲವನ್ನೂ call ಮಾಡಬೇಕು. ಇಲ್ಲಿಯೂ ಒಂದು ಸಮಿತಿ ಮಾಡಿ. ನಾವು ಕುಳಿತುಕೊಂಡು ಚರ್ಚೆ ಮಾಡುತ್ತೇವೆ, ನಾವೂ ಅಭಿಪ್ರಾಯಗಳನ್ನು ಹೇಳುತ್ತೇವೆ. Amendment ತರಲಿ. ಅನಂತರ, ತಾವು ಈ ಬಿಲ್ ಅನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅಲ್ಲಿಯವರೆಗೆ ಇದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ತಯಾರಾಗಿಲ್ಲ. ಇಲ್ಲಿ ನಮ್ಮ ಗೌರವದ ಪ್ರಶ್ನೆ involve ಆಗಿದೆ. ಇದು ತಮಾಷೆಯೇ? ತಾವು ಕುಳಿತುಕೊಂಡು ನಗುತ್ತೀರಲ್ಲ ಸರ್? ಇಡೀ ವಿಧಾನಸಭೆಯ ಗೌರವ ಕಾಪಾಡಬೇಕಾದವರೇ, ನಕ್ಕರೆ ನಾವು ಪಾಸ್ ಮಾಡಿದ ಬಿಲ್ ಅನ್ನು ಅವರು ಹೇಳಬೇಕೇ? How can this happen, Sir?

ಶ್ರೀ ಎಸ್. ಎಸ್. ಪಾಟೀಲ್: Joint Select Committee ಮಾಡುವುದನ್ನು ಬಿಟ್ಟು..ಬಿಟ್ಟರು.. ಹಾಗಾದರೆ, ಅಲ್ಲಿಯೇ ಮಾಡಿಕ್ಕೊಳ್ಳಲಿ. ಇಲ್ಲೇಕೆ ತರುತ್ತಿರಿ? ಇದನ್ನು ತಾವು ಹೊರಗೆ ಕಳುಹಿಸಿ ಬಿಡಿ ಸರ್, ಇದು ಆಗುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಇದರ ಬಗ್ಗೆ ಶಿಕ್ಷಣ ಮಂತ್ರಿಗಳ ಅಭಿಪ್ರಾಯವೇನು?

ಶ್ರೀ ವಾಟಾಳ್ ನಾಗರಾಜ್: "ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಡನೆ ಅಂಗೀಕಾರವಾದ..." ಇದು ಯಾವ ಸಭೆ? ಈ ಸಭೆಯ ಘನತೆ ಏನು? ಸಾರ್ವಭೌಮತ್ವವೇನು? ತಾವು ನಗಬಾರದು. ಆ ಪೀಠದ ಬಗ್ಗೆ ನಮಗೆ ಬಹಳ ಎಚ್ಚರ, ಗೌರವ ಇದೆ. ಅನೇಕ ಕಡೆಗಳಲ್ಲಿ ತಮಗೆ ಗೊತ್ತಿರುವಂತೆ, ಅನೇಕ ರಾಜ್ಯಗಳಲ್ಲಿ ವಿಧಾನ ಪರಿಷತ್ತು ಇಲ್ಲ. ಚರ್ಚೆಗಳಿಗಾಗಲಿ, ತಿದ್ದುಪಡಿಗಳಿಗಾಗಲಿ, ನಿಲುವಳಿ ಸೂಚನೆಗಳನ್ನು ತರುವುದಕ್ಕೂ ವಿಧಾನ ಪರಿಷತ್ತಿಗೆ ಅಧಿಕಾರವಿಲ್ಲ. ಅವರು ಎಲ್ಲದಕ್ಕೂ, ಈ ಸಭೆಯನ್ನೂ ಮೀರಿ ವಿಧಾನ ಪರಿಷತ್ತು ನಡೆಯುತ್ತಿದೆ. ಅವರು ತಿದ್ದುಪಡಿ ಮಾಡಿ ಕಳುಹಿಸಿದ್ದನ್ನು ನಾವು ಒಪ್ಪಬೇಕು. ಇದು ಸರಿಯಾದ ಕ್ರಮವಲ್ಲ. ಈ ಸದನಕ್ಕೆ, ಈ ಸದನದ ಸಾರ್ವಭೌಮತ್ವಕ್ಕೆ ಅಪಾಯ ಒದಗುತ್ತದೆ. ಈ ಸಂದರ್ಭಗಳಲ್ಲಿ ಮಾತನಾಡುವುದು ಉಚಿತವಲ್ಲ. ಆದರೂ ಮೊನ್ನೆ ಆ ಸಮಾರಂಭ ನಡೆದಾಗ ನನಗೆ ಎಷ್ಟು ನೋವಾಯಿತೆಂದರೆ, ನಾನು ಆ ಕುರಿತು ಮಾಧುಸ್ವಾಮಿಯವರಿಗೆ ಹೇಳಿದೆ. ಎನು ಮಾಡೋಣ, ನಮ್ಮಧ್ಯಕ್ಷರು ಅಲ್ಲಿ ಕುಳಿತಿದ್ದಾರೆ. ಎಲ್ಲರಿಗೂ ವಂದನಾರ್ಪಣೆಯಾಗುವವರೆಗೂ ನೀವು ಅಲ್ಲಿ ಕುಳಿತಿದ್ದಿರಿ. ವಂದನಾರ್ಪಣೆ ಸಭಾಪತಿಯವರದ್ದಾಯಿತು, ಮಂತ್ರಿಯವರದ್ದಾಯಿತು, ಇನ್ನೋಬ್ಬರದಾಯಿತು, ಎಲ್ಲರದ್ದೂ ಆದ ಮೇಲೆ ಕೊನೆಗೆ ನಿಮ್ಮ ಭಾಷಣಕ್ಕೆ ಒಬ್ಬರು. ನಾನು ಹೇಳಿದೆ. ಮಾಧುಸ್ವಾಮಿಯವರೆ, ಎದ್ದು ಹೊರಗಡೆ ಹೋಗೋಣ, ಸರಿಯಲ್ಲವೆಂದು ಹೇಳಿದ ತಕ್ಷಣ, ಇಲ್ಲ, ಬೇಡಿ. ಈ ಸಮಾರಂಭದಲ್ಲಿ ಏನೋ ಒಂದು ತರಹ ಆಗುತ್ತದೆ ಎಂದರು. ದಯಮಾಡಿ ನೀವು ಕುಳಿತಿರುವ ಆ ಕುರ್ಚಿಗೆ ನಾಳೆ ಅನೇಕರು ಬರುತ್ತಾರೆ. ಹಿಂದೆ ಅನೇಕರು ಬಂದು ಹೋಗಿದ್ದಾರೆ. ಇವತ್ತು ಆ ಕುರ್ಚಿಗೆ ಗೌರವ ಬರಬೇಕಾಗಿದೆ. ನಾನು ಏತಕ್ಕೆ ಹೇಳುತ್ತೇನೆಂದರೆ, ಅಲ್ಲಿನ ಯಾವುದೇ ಪ್ರತಿ ಆಹ್ವಾನ ಪತ್ರಿಕೆಯಲ್ಲೂ ಅವರದ್ದು ಮೊದಲಿರುತ್ತದೆ. ಇದು ಇರಬಾರದು. ಅವರಿಗೆ ಯಾವುದೇ ವಿಧವಾದ ಸಾರ್ವಭೌಮತ್ವವಿಲ್ಲ. ಆದ್ದರಿಂದ, ಈ ತಿದ್ದುಪಡಿ ಅವರು ಮಾಡಿರುವುದು. ವಿಧಾನ ಪರಿಷತ್ತಿನಿಂದ ಬಂದಿರತಕ್ಕಂಥ ತಿದ್ದುಪಡಿ.ಇದನ್ನು ನಾವು ಒಪ್ಪಲು ಸಾಧ್ಯವಿಲ್ಲ. ಅದು ಸ್ಪಷ್ಟ. ಜಂಟಿ ಸದನ ಸಮಿತಿಯೆಂದರೆ, ಅವರದೊಂದೇ ಸಮಿತಿಯಲ್ಲ. ಮೊದಲಿನಿಂದಲೂ ಬಂದಿರುವ ಈ ಪದ್ಧತಿ, Joint Select Committee ಎಂದರೆ, ಎರಡು

ಸದನಗಳ ಸದಸ್ಯರುಗಳನ್ನೊಳಗೊಂಡ ಸಮಿತಿಯಾಗಿದೆ. ಅದಕ್ಕೆ ಒಬ್ಬರೆ ಅಧ್ಯಕ್ಷರಾಗಿರುತ್ತಾರೆ. ಅದು ಬಿಟ್ಟು ಅವರದೇ ಒಂದು ಸಮಿತಿ, ನಾವೇ ಒಂದು ಸಮಿತಿ ಮಾಡಿಕೊಳ್ಳುವುದಾದರೆ, ಇದು ಸರಿಯಿಲ್ಲ. ಹಾಗಾದರೆ, ನಾವು ಒಂದು ಸಮಿತಿ ಮಾಡೋಣ. ನಮ್ಮದು ಒಂದು ಸಮಿತಿ ಮಾಡಿ.. ಇದು ಯಾವಾಗ ಬರುತ್ತದೋ ಬರಲಿ. ನಾವೇ ಮಾತಾಡೋಣ. ಏನದು ಹುಡುಗಾಟ? ಇದು ಸರಿಯಾದ ಕ್ರಮವಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈ ಬಿಲ್ ಬಗ್ಗೆ ಯಾವುದೇ ಕಾರಣಕ್ಕೂ ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ನೇರವಾಗಿ ಶಿಕ್ಷಣ ಸಚಿವರಿಗೆ ಹೇಳುತ್ತಿದ್ದೇನೆ. ನೀವು ಪಕ್ಷಪಾತದಿಂದ ಆ ಸದನ ಹೇಳಿದ್ದನ್ನು ಮಾತ್ರ ಒಪ್ಪುತ್ತೀರಿ. ಈ ಸದನದ ಸದಸ್ಯರು ಹೇಳುವುದನ್ನು ಒಪ್ಪುವುದಿಲ್ಲ. ಇವರಿಗೆ ಗೌರವ ಕೊಡುವುದಿಲ್ಲ. Select Committee ಮಾಡುವುದಕ್ಕೆ ಯಾವ ಅಧಿಕಾರವಿದೆ? Under which rule, under what Constitutional Provision you have constituted a committee there? You have to answer this House. ಈ ಸದನದ ಸಾರ್ವಭೌಮತ್ವ ಹೆಚ್ಚೇ. ಈ ಸದನದ ಅಧಿಕಾರ ಹೆಚ್ಚೇ ಎಂಬುದನ್ನು ನೀವು ಹೇಳಬೇಕು. ಮಾನ್ಯ ಅಧ್ಯಕ್ಷರೆ, ಇದು ಈ ಸದನಕ್ಕೆ ಮಾಡಿರುವ ಅಗೌರವ. ನಾವು ಈ ಬಿಲ್ ಮೇಲೆ ಇಲ್ಲಿ ಚರ್ಚಿಸುವುದಕ್ಕಾಗುವುದಿಲ್ಲ. ಏಕೆ ಇಲ್ಲಿ ಚರ್ಚಿಸಬೇಕು? ಇವರಿಗೆ ಸಮಿತಿ ಮಾಡುವುದಕ್ಕೆ ಯಾರು ಅಧಿಕಾರ ಕೊಟ್ಟದ್ದು? ಇಲ್ಲಿ ಪ್ರಶ್ನೆ ಬಂದಿರುವುದೇನೆಂದರೆ, ನಾವು ಹಲವಾರು ಸೂಚನೆಗಳನ್ನು, ಬದಲಾವಣೆಗಳನ್ನು ಈ ಬಿಲ್ ಕುರಿತು ಚರ್ಚೆ ಮಾಡುವಾಗ ಸೂಚಿಸಿದೆವು. ಅದನ್ನು ಸಾರಾಸಗಟಾಗಿ ನಿರಾಕರಣೆ ಮಾಡಿದರು. ಅಲ್ಲಿಗೆ ಹೋಗಿ ಆ ಸೂಚನೆಗಳನ್ನು ಒಪ್ಪಿದ್ದಾರೆ. ಇಲ್ಲಿ ನಿರಾಕರಣೆ ಮಾಡಿದ್ದಾರೆ, ಅಲ್ಲಿ ಹೋಗಿ ಒಪ್ಪಿದ್ದಾರೆ. ಹಾಗಾದರೆ, ಅದರ ಅರ್ಥವೇನು? ನಾವು ಹಲವಾರು ಬದಲಾವಣೆಗಳನ್ನು ಹೇಳಿದ್ದೇವೆ. ನಿಮಗೆ ಇಲ್ಲಿ ಬಹುಮತ ಇದೆಯೆಂದು ಕೈ ಎತ್ತಿಸಿಕೊಂಡು ಹೋದಿರಿ. ಅಲ್ಲಿ ನಿಮಗೆ ಬಹುಮತ ಇಲ್ಲವೆಂದು ಅವರು ಹೇಳಿದಂತೆ ಕೇಳಿಕೊಂಡು ಬಂದಿದ್ದೀರೆ. ಇಲ್ಲಿ ಪ್ರಶ್ನೆ ಇಷ್ಟೇ ಇರುವುದು. ಬೇರೇನಿಲ್ಲ. ಆದ್ದರಿಂದ, ನೀವು ಈ ಸದನಕ್ಕೆ ಅವಮಾನ ಮಾಡಿದ್ದೀರಿ. ಈ ಬಿಲ್ ಪಾಸ್ ಆದರೆ, ಈ ಸದನಕ್ಕೆ ಅವಮಾನ. ಇದನ್ನು ನಾವು ಸ್ಪಷ್ಟವಾಗಿ ಹೇಳುತ್ತಿದ್ದೇವೆ. ಈ ಬಿಲ್ ಏನಾದರೂ ಪಾಸ್

ಮಾಡಿದರೆ, ನಾನು ಎಲ್ಲರಲ್ಲೂ ವಿನಂತಿಸಿಕೊಳ್ಳುತ್ತೇನೆ. ಇಲ್ಲಿ ಪಕ್ಷಭೇದ ಮರೆತು, ಈ ಸದನದ ಘನತೆ– ಗೌರವವನ್ನು ಎತ್ತಿ ಹಿಡಿಯಬೇಕು. ಈ ಬಿಲ್ ಇಲ್ಲಿ ಪಾಸ್ ಆದಲ್ಲಿ, ಈ ಸದನಕ್ಕೆ ಮಾಡುವ ಅವಮಾನ. ನಾನು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ಬಿಲ್ ಅನ್ನು ಪಾಸ್ ಮಾಡುವುದಕ್ಕೆ ನೀವು ದಯವಿಟ್ಟು ಅನುಮತಿ ಕೊಡಬೇಕು.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗ ಶಿಕ್ಷಣ ಸಚಿವರು 2007ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಏನು ತಂದಿದ್ದಾರೆ, ಇದನ್ನು ನಾನು ಸ್ವಾಗತಿಸುತ್ತೇನೆ. ಇವತ್ತು ನಮ್ಮ ಹಿರಿಯ ಸದಸ್ಯರು ಹೇಳಿರುವುದರಲ್ಲಿ ಹುರುಳಿದೆ, ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದರ ಹಿಂದೆ ಅದರ ಉದ್ದೇಶ ಏನಿದೆ ಎಂಬುದು ಬಹಳ ಮುಖ್ಯವಾಗಿದೆ. ನಾನು ಆ ಪ್ರದೇಶದಿಂದ ಬಂದಿದ್ದೇನೆ. ಇವತ್ತು ಶಿಕ್ಷಕರುಗಳು ನಮ್ಮ ಹತ್ತಿರ ಬರುತ್ತಿಲ್ಲ. ಇವತ್ತು ಗುಣಮಟ್ಟದ ಶಿಕ್ಷಣವು ಬೆಂಗಳೂರು ಸುತ್ತಮುತ್ತ, ಅಭಿವೃದ್ಧಿ ಹೊಂದಿರುವ ಜಿಲ್ಲೆಗಳಿಗೆ ಸಿಗುತ್ತಿದೆ. ನನ್ನ ಜಿಲ್ಲೆಗೆ, ನನ್ನ ಮತ ಕ್ಷೇತ್ರದ ಜನರಿಗೆ, ಅಲ್ಲಿರುವ ಮಕ್ಕಳಿಗೆ, ಶಿಕ್ಷಕರುಗಳಿಗೆ ಗುಣಮಟ್ಟದ ಶಿಕ್ಷಣ ಕೊಡುವುದಕ್ಕಾಗುತ್ತಿಲ್ಲ. ಇವತ್ತು ಇದನ್ನು ಯಾವ ರೀತಿ ಸುಧಾರಿಸಬೇಕೆಂಬ ಬಗ್ಗೆ ಒಂದು ಒಳ್ಳೆಯ ಬಿಲ್ ತಂದಿದ್ದಾರೆ. ನಾನು ಅದನ್ನು ಸ್ವಾಗತಿಸುತ್ತೇನೆ. ಈ ಸದನದಲ್ಲಿ ಆ ಬಿಲ್ ಪಾಸ್ ಕೂಡ ಆಗಿತ್ತು. ಆದರೆ, ಆ ಸದನಕ್ಕೆ ಹೋಗಿ ತಿದ್ದುಪಡಿಯನ್ನು ಒಪ್ಪಿಕೊಂಡಿರುವುದಕ್ಕೆ ವಿರೋಧಿಸಬೇಕೆಂದೇನೂ ಇಲ್ಲ. ಏಕೆಂದರೆ, this is in the interest of the public, in the interest of the students of my area. ಶಾಸಕರುಗಳಾದ ನಾವು ಇಲ್ಲಿ ಏತಕ್ಕೆ ಬಂದಿದ್ದೇವೆಂದರೆ, we have come here to protect the interest of the people. ಒಂದು ವೇಳೆ ಈ ಸದನದ ಅಭಿಪ್ರಾಯವನ್ನು ಕೇಳಲಿಲ್ಲವೆಂದು ನಮ್ಮ ಹಿರಿಯ ಶಾಸಕರ ಅಭಿಪ್ರಾಯವಿದ್ದರೆ, ಮಾನ್ಯ ಸಚಿವರಲ್ಲಿ ನಾನು ಒಂದು ಮನವಿ ಮಾಡಿಕೊಳ್ಳುತ್ತೇನೆ. ನೀವು ಬಿಲ್ ಅನ್ನು ಪಾಸ್ ಮಾಡಿ. ಆಮೇಲೆ ಸದನ ಸಮಿತಿ ಮಾಡಿ. ಅದರ ಶಿಫಾರಸ್ಸುಗಳನ್ನು ನೀವು amendment ಆಗಿ ತೆಗೆದುಕೊಂಡು ಬನ್ನಿ. ನಾನು ಬೇಡವೆಂದು ಹೇಳುವುದಿಲ್ಲ. ಈ ಸದನದ ಘನತೆಯನ್ನು ಕಡಿಮೆಗೊಳಿಸಬೇಕೆಂದು ನಾನು

ಹೇಳುವುದಿಲ್ಲ. ನೀವು ಒಂದು ವೇಳೆ ಇದಕ್ಕೇನಾದರೂ ಇಲ್ಲಿ ನಮ್ಮೆಲ್ಲರ ಸದನ ಸಮಿತಿ ಮಾಡಿ ಅದರ ಸಲಹೆಗಳನ್ನು ತೆಗೆದುಕೊಳ್ಳಬೇಕಾದರೆ, ನೀವು amendment ತನ್ನಿ. ಆದರೆ, ಈ ಬಿಲ್ ಅನ್ನು ನೀವು ಪಾಸ್ ಮಾಡಲೇಬೇಕು. ಏಕೆಂದರೆ, ನಮ್ಮ ಭಾಗದ ಮಕ್ಕಳಿಗೆ ನ್ಯಾಯ ಸಿಗಬೇಕೆಂದರೆ, ಅಲ್ಲಿ ಅವರಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಇವತ್ತು ಬಹಳ disparity ಇದೆ. ಸಚಿವರು ಕೇವಲ ಬಿಲ್ ತಂದಿದ್ದರಿಂದ ನಮ್ಮ ಭಾಗದವರಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ಸಿಗುತ್ತದೆ ಎಂದೇನೂ ಅಲ್ಲ. ಆದರೆ ಕನಷ್ಟ ಪಕ್ಷ ಮಕ್ಕಳಿಗೆ ಪಾಠ ಹೇಳಿಕೊಡುವುದಕ್ಕೆ ಒಬ್ಬ ಮೇಷ್ಟ್ರಾದರೂ ಸಿಗುತ್ತಾರೆ ಎನ್ನುವುದೇ ನಮ್ಮ ಕಳಕಳಿಯಾಗಿದೆ. ಅದಕ್ಕಾಗಿ ನಾನು ಈ ಬಿಲ್ ಅನ್ನು ಸ್ವಾಗತ ಮಾಡುತ್ತೇನೆ. ಇದರಲ್ಲಿ ಏನು ನ್ಯೂನ್ಯತೆಗಳಾಗಿವೆ ನಮ್ಮ ಹಿರಿಯ ಸದಸ್ಯರು ಹೇಳಿದಂತೆ ಅದನ್ನು ತಿದ್ದುಪಡಿಯಾಗಿ ನೀವು ಮುಂದೆ ತನ್ನಿ. ಆದರೆ ಈಗ ಈ ಬಿಲ್ ಅನ್ನು ಪಾಸ್ ಮಾಡಿ ನಮ್ಮ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ವೈಜನಾಥ್ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ಏನೋ ಈ ಬಿಲ್ ತಂದು eye wash ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಗುಲ್ಬರ್ಗಾ ವಿಭಾಗದಲ್ಲಿ ಈ ಬಿಲ್ ಸ್ವಾಗತಾರ್ಹವಾದುದೇನಲ್ಲ. ಏಕೆಂದರೆ ಕಳೆದ ಸಲ 1200 ಟೀಚರ್ಸ್ ಆ ಭಾಗದಿಂದ ಟ್ರಾನ್ಸ್‌ಪರ್ ಆದರು. ಎಲ್ಲಾ ಹುದ್ದೆಗಳು ಖಾಲಿ ಬಿದ್ದವು. ಅಲ್ಲಿ ಜಿಲ್ಲಾ ಪಂಚಾಯತ್‌ನವರು ಈ ಟ್ರಾನ್ಸ್‌ಪರ್‌ಗಳನ್ನು ತಡೆಹಿಡಿದರು ರಿಲೀವ್ ಮಾಡಬಾರದೆಂದು. ಕೊನೆಗೆ ಹೈಕೋರ್ಟ್‌ಗೆ ಹೋಗಿ ಆರ್ಡರ್ ತಂದರು. ಕೆಲವರು ಇಲ್ಲಿ ಮಂತ್ರಿಗಳನ್ನು ಹಿಡಿದುಕೊಂಡು ಆರ್ಡರ್ ತಂದರು. ಹೀಗಾಗಿ ಈಗ ಮಾನ್ಯ ಶಿಕ್ಷಣ ಸಚಿವರು ಇದು ವಿರೋಧ ಆಗುತ್ತದೆಂದು ನಮ್ಮ ಭಾಗದವರಿಗೆ eye wash ಮಾಡುವುದಕ್ಕೆ ಸಮಾಧಾನ ಮಾಡುವುದಕ್ಕೆ ಒಂದು ಬಿಲ್‌ನ್ನು ಈಗ ತಂದಿದ್ದಾರೆ. ಆದರೆ ಇದರಿಂದ ಏನೂ ಉಪಯೋಗವಾಗುವುದಿಲ್ಲ. ಏಕೆಂದರೆ ಯಾರಾದರೂ ಕೋರ್ಟ್‌ಗೆ ಹೋದರೆ ಈ ಬಿಲ್ ನಿಲ್ಲುವುದಿಲ್ಲ. ಆ ದೃಷ್ಟಿಯಿಂದ ಕಲಂ 371 ಕ್ಕೆ ನೀವು ತಿದ್ದುಪಡಿ ತಂದರೆ ಮಾತ್ರ ಈ ಬಿಲ್‌ಗೆ ಬೆಲೆ ಇದೆ. ಇಲ್ಲದೇ ಹೋದರೆ ಇದು ಸ್ವಾಗತಾರ್ಹವಲ್ಲ. ಸುಮ್ಮನೆ eye wash ಮಾಡುವಂತಿದೆ. ನಮ್ಮ ಭಾಗಕ್ಕೆ

ಈ ಬಿಲ್‌ನಿಂದ ಯಾವುದೇ ಉಪಯೋಗವಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಕಲಂ 371 ಕ್ಕೆ ತಿದ್ದುಪಡಿ ತರುವುದಕ್ಕೆ ನಮಗೆ ಅಧಿಕಾರವಿಲ್ಲ. ಆದರೆ ನಮ್ಮ ಶಿಕ್ಷಣ ಸಚಿವರು ಮಧ್ಯಮ ದಾರಿಯನ್ನು ಹಿಡಿದುಕೊಂಡು ಅನುಕೂಲವಾಗಬೇಕು ಎಂದು ಒಂದು ಉತ್ತಮವಾದ ಬಿಲ್ಲನ್ನು ತಂದಿದ್ದಾರೆ. ಅದನ್ನು ನಾವು ಇಲ್ಲಿ ಎಲ್ಲರೂ ಪಾಸ್ ಮಾಡಿದ್ದೇವೆ. ಇದನ್ನು ಅವರು ವಿರೋಧ ಮಾಡಿದ್ದಾರೆ ಅಂತ ಹೇಳಿ ನಾವು ಒಪ್ಪುವುದಕ್ಕಾಗುವುದಿಲ್ಲ. ಈ ಬಿಲ್ ಅನ್ನು ಬಹಳ ದೂರದೃಷ್ಟಿಯನ್ನಿಟ್ಟು ಕೊಂಡು ತಂದಿದ್ದಾರೆ. ಇದು 371ಕ್ಕೆ ತಿದ್ದುಪಡಿಯಾಗುವ ತನಕ ಈ ಬಿಲ್ ನಮಗೆ ಅನುಕೂಲವಾಗುತ್ತದೆ.

ಶ್ರೀ ವೈಜನಾಥ್ ಪಾಟೀಲ್: 371ಕ್ಕೆ ತಿದ್ದುಪಡಿಯಾಗಲೇ ಬೇಕು.

ಶ್ರೀ ಬಿ.ಆರ್. ಪಾಟೀಲ್: 371ಕ್ಕೆ ತಿದ್ದುಪಡಿಯಾಗುವವರೆಗೂ ನಾವು ಸಫರರ್ ಆಗಬೇಕೇನು? ಸದ್ಯ ನಾವು ಪರಿಹಾರ ಕಂಡುಕೊಳ್ಳಬೇಕಿದ್ದರೆ ಇಂಥ ಕಾನೂನುಗಳಿಂದ ನಾವು ಪರಿಹಾರವನ್ನು ಕಂಡುಹಿಡಿದುಕೊಳ್ಳುವುದಕ್ಕೆ ಸಾಧ್ಯವಿದೆ. ಆದುದರಿಂಧ ಮಾನ್ಯ ಶಿಕ್ಷಣ ಸಚಿವರು ಈ ಬಿಲ್ ಅನ್ನು ಮತ್ತೆ ಮಂಡಿಸಿ ಪಾಸ್ ಮಾಡಿಸಿಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಹಿಂದೆಯೂ ತಿದ್ದುಪಡಿಗೆ ಬಿಲ್ ತಂದಾಗ ನಾವೆಲ್ಲರೂ ಸಲಹೆಗಳನ್ನು ಕೊಟ್ಟಿದ್ದೇವಲ್ಲ? ಇಲ್ಲಿ ನಾವು ಕೊಟ್ಟ ಈ ಸಲಹೆಗಳನ್ನು ಒಪ್ಪಲಿಲ್ಲ. ಆದರೆ ಇಲ್ಲಿ ಪಾಸ್ ಮಾಡಿಸಿಕೊಂಡು ಹೋದ ಬಿಲ್‌ಗೆ ನೀವು ಅಲ್ಲಿಂದ ಅಮೆಂಡ್ ಮಾಡಿಸಿಕೊಂಡು ಈಗ ವಾಪಸ್ ತೆಗೆದುಕೊಂಡು ಬಂದಿದ್ದೀರಿ. ಬಿ.ಆರ್. ಪಾಟೀಲರೆ, ಈ ಬಿಲ್‌ನಿಂದ ಸಹಾಯವಾಗುತ್ತದೆ ಎಂಧು ನಿಮಗನ್ನಿಸಿರಬಹುದು. ಆದರೆ ಇದರಿಂದಾಗಿ ಹೆಚ್ಚಿನವರು ಅಲ್ಲಿಂದ ವರ್ಗಾವಣೆ ಮಾಡಿಸಿಕೊಂಡು ಪುನಃ ಬೇರೆ ಕಡೆಗೆ ಹೋಗುತ್ತಾರೆ. ಅಲ್ಲಿ ಯಾರೂ ಉಳಿಯುವುದಿಲ್ಲ.

ಶ್ರೀ ಬಿ.ಆರ್. ಪಾಟೀಲ್:– ವರ್ಗಾವಣೆಯಾಗಬಾರದು ಎಂದೇ ಈ ಬಿಲ್ ತರುತ್ತಿರುವುದು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ :– ಆಗುತ್ತದೆ. ಈ ಬಿಲ್ ಮೊದಲಿದದ್ದಕ್ಕೆ ಮೇಲ್ಮನೆಯಲ್ಲಿ ಏಕೆ ತಿದ್ದುಪಡಿ ತಂದರು ಎಂಬ ಬಗ್ಗೆಯಾದರೂ ಸ್ವಲ್ಪ ಮಾಹಿತಿ ಕೊಡಿ. ಅದರ ಬಗ್ಗೆಯಾದರೂ ಚರ್ಚೆಯನ್ನು ಮಾಡೋಣ. ಆ ಮಾಹಿತಿಗಳನ್ನು ಕೊಡದಿದ್ದರೆ ನಾವು ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.ಇದರ ಜೊತೆ ನೀವು ಏನು ಈಗ ಪ್ರೀ– ಯುನಿವರ್ಸಿಟಿಯದ್ದು ಕೌನ್ಸಲಿಂಗ್‌ನ್ನು ಮಾಡುತ್ತಿದ್ದೀರಲ್ಲ, ಅದರಲ್ಲಿಯೇ ಉದಾಹರಣೆಯನ್ನು ತೆಗೆದುಕೊಂಡರೆ ಅಲ್ಲಿ ಈಗ ನಿಮ್ಮ ನೇಮಕಾತಿಯನ್ನು ಮುಂದೂಡಿದ್ದೀರಿ. ಈಗ ಪ್ರಮೋಶನ್ ಆಗಿ ಬಂದವರದ್ದು ನೀವು ಕೌನ್ಸಿಲಿಂಗ್‌ನಲ್ಲಿ ನಮ್ಮ ಭಾಗದ್ದೆಲ್ಲವನ್ನೂ ಇಟ್ಟೇ ಇಲ್ಲ. ಖಾಲಿ ಹುದ್ದೆಗಳನ್ನು ಇಟ್ಟಿಲ್ಲ. ಅವರಿಗೆ ಕೇಳುವುದಕ್ಕೂ ಆಗುತ್ತಿಲ್ಲ. ಅದನ್ನು ಪುನಃ ತೆರವು ಮಾಡಿ ಕೌನ್ಸಿಲಿಂಗ್‌ನಲ್ಲಿ ನಮ್ಮ ಭಾಗದಲ್ಲಿ ಪೋಸ್ಟ್‌ಗಳನ್ನು fill up ಮಾಡುವುದಕ್ಕೆ ಕ್ರಮ ತೆಗದುಕೊಳ್ಳಬೇಕು. ಈಗ ಈ ಬಿಲ್‌ನಲ್ಲಿ ಏನೇನು ತಿದ್ದುಪಡಿಗಳನ್ನು ಏಕೆ ಬದಲಾವಣೆ ಮಾಡಲಾಗಿದೆ, ಅದರ ಬಗ್ಗೆ ಸ್ವಲ್ಪ ಮಾಹಿತಿಗಳನ್ನು ನಮಗೆ ಕೊಡಬೇಕೆಂದು ತಮ್ಮ ಮುಖೇನ ಕೇಳ ಬಯಸುತ್ತೇನೆ.

ಶ್ರೀ ಆರ್. ಧ್ರುವ ನಾರಾಯಣ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ಒಳ್ಳೆಯ ಬಿಲ್ ಅನ್ನು ಮಂಡಿಸಿದ್ದಾರೆ. ನಮ್ಮ ಚಾಮರಾಜ ನಗರ ಗಡಿ ಜಿಲ್ಲೆಯಾಗಿದೆ. ಅಲ್ಲಿ ಶಿಕ್ಷಕರ ಸಮಸ್ಯೆ ಬಹಳಷ್ಟಿದೆ. ಇಂಥ ಸಮಯದಲ್ಲಿ ಒಂದು ಒಳ್ಳೆಯ ಬಿಲ್ ಅನ್ನು ತಂದಿದ್ದಾರೆ. ಈ ಬಾರಿಯೇ ಸಾಕಷ್ಟು ಸುಧಾರಣೆಯಾಗಿದೆ. ಅವರು ಹೇಳಿದರು. ಗುಲ್ಬರ್ಗಾ ಜಿಲ್ಲೆಯಲ್ಲಿ ಈ ಬಾರಿ ಯಾವುದೇ ಶಿಕ್ಷಕರ ಸಮಸ್ಯೆ ಇಲ್ಲದ ಹಾಗೆ ಮಾಡಿದ್ದೇನೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಈ ಬಿಲ್‌ನಿಂದಲೂ ಕೂಡ ಬಹಳಷ್ಟು ಅನೂಕೂಲವಾಗುತ್ತದೆ. ದಯಮಾಡಿ ಈ ಬಿಲ್ ಅನ್ನು ಪಾಸ್ ಮಾಡಿಕೊಡಬೇಕೆಂದು ನಾನೂ ಕೂಡ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಹೊರಟ್ಟಿ (ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ನಾನು ಈ ಸದನಕ್ಕೆ ಸಂಪೂರ್ಣವಾಗಿ ಮಾಹಿತಿಗಳನ್ನು ಕೊಡಬಯಸುತ್ತೇನೆ. ಈ ಮನೆಯಲ್ಲಿ ಹಿಂದೆ ಏನು ಚರ್ಚೆ ಮಾಡಿ ಸಲಹೆ ಮಾಡಿದ್ದರೋ ಅದನ್ನು ಮಾಡಲು ಸೆಲೆಕ್ಷನ್ ಕಮಿಟಿ ಎಂಬುದನ್ನು ಅಲ್ಲ, ಒಂದೇ ಒಂದು ಮೀಟಿಂಗ್, ಕಾನೂನು ಪ್ರಕಾರ ನಿಯಮದ ಪ್ರಕಾರ ನೀವು

ಮಾಡಬೇಕು ಎಂದರು. ಒಂದೇ ಒಂದು ಮೀಟಿಂಗ್ ಅರ್ಧ ತಾಸು ಮಾಡಿದ್ದೇನೆ. ಇಲ್ಲಿ ಏನು ಸಲಹೆಗಳನ್ನು ಕೊಟ್ಟಿದ್ದರು, ಈಗೇನು ಇವರು ಹೇಳಿದರು, ಮೊದಲಿಗೆ ಹೈಸ್ಕೂಲ್ ಟೀಚರ್‌ದು ಪ್ರಮೋಶನ್ ಆದರೆ ಅವರು 15 ವರ್ಷ ಹಳ್ಳಿಯಲ್ಲಿ ಸೇವೆ ಮಾಡಿರುತ್ತಾರೆ. ಪ್ರಮೋಶನ್ ಆದ ಕೂಡಲೇ ಲೆಕ್ಚರರ್ಸ್ ಆಗಿ 4 ವರ್ಷ ಸರ್ವಿಸ್ ಮಾಡುವ ಸ್ಥಿತಿಯೊಳಗಿದ್ದರೆ ಅವನಿಗಿಂತ ಇವನನ್ನು ಜೂನಿಯರ್ ಮಾಡಿದ್ದೆವು. ಅದನ್ನು ಈಗ ಏನು ಮಾಡಿದ್ದೇವೆಂದರೆ, ಹಳ್ಳಿಯಲ್ಲಿ ಮಾಡಿರುವ ಸರ್ವಿಸ್ ಅನ್ನು ಹಿಡಿದು ಅವರನ್ನು 'ಎ' ಮತ್ತು 'ಬಿ' ವಲಯಕ್ಕೆ ಹಾಕಬೇಕೆಂದು ಈಗ ಮಾಡಿದ್ದೇವೆ. ಇದೊಂದು. ಆಮೇಲೆ ಪತಿ–ಪತ್ನಿ ವಿಷಯದಲ್ಲಿ 5 ವರ್ಷದೊಳಗೆ ವರ್ಗಾವಣೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದೆವು. ಈಗ ಅವರಿಗೆ ಯಾವಾಗ ಬೇಕಾದರೂ ಕೂಡ ಟ್ರಾನ್ಸ್‌ಫರ್ ಮಾಡುವಂಥ ವ್ಯವಸ್ಥೆಯನ್ನು ಅವಕಾಶ ಕಲ್ಪಿಸಿದ್ದೇವೆ. ಫಿಸಿಕಲಿ ಹ್ಯಾಂಡಿಕ್ಯಾಪ್ಟ್‌ಗೆ ವರ್ಗಾವಣೆಯನ್ನು ಡಿಸ್ಟ್ರಿಕ್ಟ್ ಅಥಾರಿಟಿಯಿಂದ ಮಾಡಬೇಕೆನ್ನುವಂಥ ಎರಡು ಮೂರು ಸಲಹೆಗಳಿದ್ದವು. ಇಲ್ಲಿ ಏನು ಸಲಹೆಗಳನ್ನು ಕೊಟ್ಟಿದ್ದರೋ ಆ ಬಗ್ಗೆ ಅರ್ಧ ತಾಸಿಗಿಂತ ಕಡಿಮೆ ಅವಧಿಯ ಸಭೆಯಲ್ಲಿ ಕಾನೂನು ಪ್ರಕಾರ ಅಮೆಂಡ್ ಮೆಂಟ್ ಅನ್ನು ಮಾಡಬೇಕು ಎಂದು ಇದನ್ನು ಮಾಡಿದ್ದೇವೆಯೇ ಹೊರತು ಬೇರೇನೂ ಅಲ್ಲ. ಕಳೆದ ಸಲ 61 ಸಾವಿರ ಅರ್ಜಿಗಳು ವರ್ಗಾವಣೆಗೆ ಬಂದಿತು. ಈ ಸಲ ಇಲ್ಲಿಯವರೆವಿಗೆ ಕೇವಲ 600 ವರ್ಗಾವಣೆಗಳಾಗಿವೆ. 2005 ನೇ ಇಸವಿಗಿಂತ ಹಿಂದೆ ನೇಮಕಾತಿಯಾದವರಿಗೆ ಅವರುಗಳು ಯಾರ್ಯಾರು 5 ವರ್ಷ ಸರ್ವಿಸ್ ಮಾಡಿದ್ದಾರೋ ಅವರೆಲ್ಲರಿಗೂ ಒಂದು ಸಾರಿ ಅವರವರ ಜಿಲ್ಲೆಗೆ ಹೋಗುವುದಕ್ಕೆ ಅನುಮತಿಯನ್ನು ಕೊಡಲಾಗಿದೆ. ಇವತ್ತು ಎಲ್ಲಾ ರೀತಿಯಿಂದ ಇಲ್ಲಿ ಏನು ಸಲಹೆ ಗಳನ್ನು ಕೊಟ್ಟಿದ್ದಾರೋ ಅದೇ ಸಲಹೆಗಳಿವೆಯೇ ಹೊರತು ಬೇರೆ ಯಾವುದೇ ಅಮೆಂಡ್ ಮೆಂಟ್ ಇರಲಿಲ್ಲ. ಇಷ್ಟೆಲ್ಲಾ ಆದ ನಂತರ ಇವತ್ತು ವೈಜನಾಥ್ ಪಾಟೀಲ್‌ರವರು ಹೇಳಿದ್ದಕ್ಕೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಹಿಂದೆ ಟೀಚರ್ಸ್ ಗುಳೆ ಕಟ್ಟಿಕೊಂಡು ಬರುವ ಹಾಗೆ ಬರುತ್ತಿದ್ದರು. ಇವತ್ತು ಅಂಥ ಪರಿಸ್ಥಿತಿ ನಿರ್ಮಾಣವಾಗಿಲ್ಲ. 19,400 ಟೀಚರ್ಸ್ ನೇಮಕಾತಿಯಾದರೆ ಇವರೆಲ್ಲರೂ ಹಳ್ಳಿಯಲ್ಲಿಯೇ ಕೆಲಸವನ್ನು ಮಾಡುತ್ತಿದ್ದಾರೆ. ಒಬ್ಬರದ್ದೂ ಕೂಡ ವರ್ಗಾವಣೆ

ಮಾಡಬೇಕೆಂದು ಇವತ್ತಿನವರೆವಿಗೂ ಒಂದು ಪತ್ರವೂ ಬಂದಿಲ್ಲ. ವರ್ಗಾವಣೆಯನ್ನು ಬಯಸಿಲ್ಲ. ಯಾವುದೇ ರೀತಿಯಿಂದಲೂ ಶಿಕ್ಷಕರಿಗೂ ಕೂಡ ಅನ್ಯಾಯವಾಗಿಲ್ಲ. ಇಷ್ಟೆಲ್ಲಾ ಮಾಡಿರುವ ನಾನು ತಮ್ಮ ಮೂಲಕ ಕ್ಷಮೆ ಕೇಳುತ್ತೇನೆ. ಇನ್ನೊಂದು ಸಾರಿ ಈ ರೀತಿಯಾಗದಂತೆ ನೋಡಿಕೊಳ್ಳುತ್ತೇನೆ. ಈಗ ಮಾಡಿರುವುದನ್ನು ಜನರ ಮತ್ತು ಮಕ್ಕಳ ಹಿತದೃಷ್ಟಿಯಿಂಧ ಮಾಡಿದ್ದೇನೆಯೇ ಹೊರತು ಈ ಸದನಕ್ಕೆ ಯಾವುದೇ ರೀತಿಯಿಂದ ಅವಮಾನ ಮಾಡಬೇಕೆನ್ನುವ ವಿಚಾರ ನನ್ನಲ್ಲಿ ಇರಲಿಲ್ಲ. ಕೇವಲ ಅರ್ಧ ತಾಸಿನಲ್ಲಿ ಐದಾರು ದಿವಸಗಳ ಮುಂಚೆ ಈ ಬಿಲ್ ಅನ್ನು ತರುವುದಕ್ಕೆ ಮುಂಚೆ ನನ್ನ ಅಧ್ಯಕ್ಷತೆಯಲ್ಲಿ ಸಭೆ ನಡೆದು ನೀವು ಹೇಳಿದಂಥ ವಿಷಯಗಳನ್ನು ಇದರಲ್ಲಿ ಸೇರಿಸಿದ್ದೇವೆಯೇ ಹೊರತು ಬೇರೆ ಯಾವುದೂ ಇಲ್ಲ. ಈಗ ಜಿಲ್ಲೆಯಿಂದ ಜಿಲ್ಲೆಗೆ ಹೋಗುವಂಥ ವ್ಯವಸ್ಥೆ ಕಡಿಮೆಯಾಗುತ್ತದೆ. ಎಲ್ಲಿ ಟೀಚರ್ ಜಿಲ್ಲೆಯಲ್ಲಿ ಅಪಾಯಿಂಟ್ ಆಗುತ್ತಾರೋ ಅಲ್ಲಿಯೇ ಸರ್ವಿಸ್ ಮಾಡುವಂಥ 95% ಜನರು ಇದ್ದಾರೆ. ಅವರು ಅಲ್ಲಿಯೇ ಸರ್ವಿಸ್ ಮಾಡುತ್ತಾರೆ. ಮೂಲಭೂತ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ನಾವೇನು ಕಲ್ಪನೆಯಲ್ಲಿದ್ದೇವೆಯೋ ಅದರಲ್ಲಿ ಮೊದಲು ಟೀಚರ್ ಬರುತ್ತಾರೆ. ಟೀಚರ್ ಎನ್ನುವವರೇ ಇಲ್ಲದೇ ಮೂಲಭೂತ ಸೌಲಭ್ಯ ಕಲ್ಪಿಸಿ ಕೊಡುವುದಕ್ಕಾಗುವುದಿಲ್ಲವೆನ್ನುವಂಥ ದೃಷ್ಟಿಯಿಂದ ಈಗ ಮಾಡಿದ್ದೇವೆ. ನಾನು ದಯಮಾಡಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದರಲ್ಲಿ ಯಾವುದೇ ರೀತಿಯಿಂದ ಪ್ರೆಸ್ಟೀಜ್ ಆಗಲಿ ಅಥವಾ ಈ ಸದನಕ್ಕೆ ಅವಮಾನ ಮಾಡಬೇಕೆನ್ನುವ ವಿಚಾರ ನನ್ನಲ್ಲಿ ಇಲ್ಲ. ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದೊಂದು ಒಳ್ಳೆಯ ದೃಷ್ಟಿಯಿಂದ ತಂದಿರುವ ಬಿಲ್ ಆಗಿದೆ. ಇದರಲ್ಲಿ ಬೇರೆ ಯಾವುದೇ intention ಇಲ್ಲ. ಮಿಕ್ಕಿದ್ದು ಈ ಸದನಕ್ಕೆ ಬಿಟ್ಟದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಎಸ್.ಡಿ.ಎಂ.ಸಿ.ಗಳ ಬಗ್ಗೆ ಕಾರ್ಯವೈಖರಿಯನ್ನು ತನಿಖೆ ಮಾಡಿ ಅಮೆಂಡ್‌ಮೆಂಟ್ ಮಾಡುವುದಕ್ಕೆ ಒಂದು ಕಮಿಟಿ ಮಾಡಿದರು. ಅದು ಸಭೆಯ ಗಮನಕ್ಕೆ ಬರಲಿಲ್ಲ. ನಾಳೆ ಅದೊಂದು ಬಿಲ್ ಇಲ್ಲಿಗೆ ಬರುತ್ತದೆ. ಈ ಬಿಲ್ ಬಗ್ಗೆ ಒಂದು ಸಮಿತಿ ಮಾಡಿ ಶಿಫಾರಸ್ಸು ತೆಗೆದುಕೊಂಡು ಇವತ್ತು ಇಲ್ಲಿ ಬಿಲ್

ಬಂದಿದೆ. ಇಲ್ಲಿಂದ ಅಮೆಂಡ್ ಆಗಿ ಬಿಲ್ ಅಲ್ಲಿಗೆ ಹೋಗಬೇಕು. ನಾವು ಮಾತನಾಡಿದ ಮೇಲೆ ನಾವೇನು ಸಜೆಶನ್ಸ್ ಕೊಟ್ಟಿದ್ದೇವೆ, ಈ ಶಾಸನ ಸಭೆ ಏನು ಸಜೆಶನ್ಸ್ ಕೊಟ್ಟಿರುತ್ತದೋ ಆ ತಿದ್ದುಪಡಿಗಳನ್ನು ತೆಗೆದುಕೊಂಡು ಮಂತ್ರಿಗಳು ಅಲ್ಲಿಗೆ ಹೋಗಿದ್ದರೆ ಸ್ವಾಗತಾರ್ಹ. ಈ ರೀತಿ ಮಾಡೇ ಇಲ್ಲ. ಇಲ್ಲಿ ತಿದ್ದುಪಡಿಗಳು ಆಗುವುದಿಲ್ಲ. ಅಲ್ಲಿಂದ ತಿದ್ದುಪಡಿಗಳಾಗಿ ಇಲ್ಲಿಗೆ ಬರುತ್ತವೆ. ಈ ರೀತಿಯಾದರೆ ಈ ಸಭೆಗೆ ಗೌರವ, ಘನತೆ ಎಲ್ಲಿ ಬರುತ್ತದೆ ನೀವೇ ಹೇಳಿ ಸಾರ್.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ಬಿಲ್ ಬಗ್ಗೆ ನಮ್ಮ ತಕರಾರೇನೂ ಇಲ್ಲ. ಈ ಸದನಕ್ಕೆ ಆಗಿರುವ ಅವಮಾನದ ಬಗ್ಗೆ ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಸಚಿವರು):– ಮಾನ್ಯ ಅಧ್ಯಕ್ಷರೆ, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿಗೆ ಯಾವುದೇ ತರಹದಲ್ಲಿಯೂ ಅಗೌರವ ಮಾಡತಕ್ಕಂಥ ಪ್ರಶ್ನೆ ಇಲ್ಲಿ ಬರುವುದಿಲ್ಲ. ಎರಡೂ ಸಭೆಗಳೂ ಕೂಡ ಶಾಸಕಾಂಗದ ಪಕ್ಷಗಳು ಶಾಸಕಾಂಗವೆಂದೇ ಭಾವಿಸುತ್ತೇವೆ. ಅವರನ್ನೂ ಕೂಡ ಲೆಜಿಸ್ಲೇಟರ್ಸ್ ಎಂದೇ ಕರೆಯುತ್ತೇವೆ. ನಾವೇ ನಮ್ಮದೇ ಆದಂಥ ಕಾನೂನಿನ ಮೂಲಕವಾಗಿ ನಾವು ವಿಧಾನ ಪರಿಷತ್ತನ್ನು ಮಾಡಿದ್ದೇವೆ. ಆದರೆ ವಿಧಾನಸಭೆಗೆ ಇರುವಂತಹ ಮಹತ್ವ ಬೇರೆ. ನಾವು ಜನತೆಯಿಂದ ಆರಿಸಿ ಬಂದಿರುತ್ತೇವೆ. ಆದರೆ ನಮ್ಮಲ್ಲಿಯೇ ಇರುವಂತಹ ಸದಸ್ಯರನ್ನು ನಾವೇ ಆಯ್ಕೆ ಮಾಡಿ ವಿಧಾನ ಪರಿಷತ್ತಿಗೆ ಕಳುಹಿಸಿಕೊಡುತ್ತೇವೆ. ದಯವಿಟ್ಟು ಹಾಗೆ ಹೋಗಬಾರದು.

ಶ್ರೀ ವಾಟಾಳ್ ನಾಗರಾಜ್ : ನಮಗೆ ನಿಮ್ಮ ಬಗ್ಗೆ ಗೌರವವಿದೆ. ಈ ಸದನಕ್ಕೆ ಅಗೌರವ....

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಮಾಧುಸ್ವಾಮಿ, ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ ಸಭೆಯಿಂದ ನಿರ್ಗಮಿಸಿದರು).

ಶ್ರೀ ಧರ್ಮಸಿಂಗ್: ಇಲ್ಲಿ ಈ ಬಿಲ್ ಏನು ತಂದಿದ್ದಾರೆ ಅದನ್ನು ರಾಜ್ಯದ ಹಿತದೃಷ್ಟಿಯಿಂದ ಮತ್ತು ಹಳ್ಳಿಯ ಶಿಕ್ಷಕರ ಹಿತದೃಷ್ಟಿಯಿಂದ ನಾವು ಒಪ್ಪಿದ್ದೇವೆ. ಆದರೆ ನಾವು ಇಲ್ಲಿ ಸಲಹೆ ಸೂಚನೆಗಳನ್ನು ಕೊಟ್ಟಮೇಲೆ ಅಲ್ಲೇ ಒಂದು committee ಯನ್ನು constitute ಮಾಡಿ ವಿಧಾನ ಪರಿಷತ್ತಿನಲ್ಲಿ ಏಕೆ amendment ಮಾಡಿದರು? ಅದು ನಮ್ಮ ಮನೆಯಲ್ಲಿ ಪಾಸ್ ಆಗಿ ಹೋಗಬೇಕೆನ್ನುವುದೇ ನಮ್ಮ ವಾದ. ಅದರ ಬಗ್ಗೆ ಸರಿಯಾದ ಕ್ರಮ ಇಲ್ಲವೆನ್ನುವುದೇ ನಮ್ಮ ಅಭಿಪ್ರಾಯ.. ಅದರ ಬಗ್ಗೆ ಇನ್ನೇನೂ ಇಲ್ಲ. ಏಕೆಂದರೆ ಅಲ್ಲಿ ಕೂಡ floor leader ಇದ್ದಾರೆ. ಅಲ್ಲಿ ಎಲ್ಲರೂ ಹಿರಿಯರಿದ್ದಾರೆ, ಅವರಿಗೆ ಮಾನ್ಯತೆ ಕೊಡಬೇಕಾಗುತ್ತದೆ. ಅವರಿಗೆ by-pass ಮಾಡಿ ಹೋಗುವಂತಹ ವಿಚಾರ ಇಲ್ಲ. ಇವತ್ತಿನ ದಿವಸ ಶಿಕ್ಷಣದ ವಿಚಾರದಲ್ಲಿ in good faith ಸುಧಾರಣೆಯನ್ನು ತರುತ್ತಿದ್ದಾರೆ ಎಂದು ಹೇಳಿದ್ದೇವೆ. ಮಾನ್ಯ ಹೊರಟ್ಟಿಯವರೆ ನೀವು ಸ್ವಲ್ಪ advance ಇದ್ದೀರಿ, ಅಲ್ಲಿ ಏಕೆ ಹೋಗಿ ಮಾಡಿದಿರಿ? ಅದನ್ನು ಮೊದಲೇ ಇಲ್ಲಿ ಮಾಡಬೇಕಾಗಿತ್ತು.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಇಲ್ಲಿ ಅನೇಕ ಸಲಹೆಗಳು ಬಂದಿವೆ.

ಶ್ರೀ ಧರ್ಮಸಿಂಗ್: ಅಲ್ಲಿ ಕಮಿಟಿ ಮಾಡಿ ಅಲ್ಲಿ ಪಾಸ್ ಮಾಡಿ ಇಲ್ಲಿ ಏಕೆ ತೆಗೆದುಕೊಂಡು ಬಂದಿರಿ?

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಅದರ ಬಗ್ಗೆ ಚರ್ಚೆಯಾಯಿತು. ಚರ್ಚೆಯಾದ ನಂತರ ನಾವು ಹೇಳಿದಾಗ, ಈ ಬಿಲ್ ಅನ್ನು fail ಮಾಡುವಂತಹ ಪರಿಸ್ಥಿತಿ ಬಂದಾಗ ಅದನ್ನು ಮಾಡಿದೆವು ಹೊರತು, ಬೇರೆ ಏನೂ ಇಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಈ ಬಿಲ್ pass ಮಾಡುವುದು ಅಥವಾ Bill merits ಗೆ ನಾವು ಹೋಗುತ್ತಿಲ್ಲ. ಹಿರಿಯರಾದ ಮಾನ್ಯ ಸಂಸದೀಯ ವ್ಯವಹಾರ ಸಚಿವರು I thought he would help you. ಅವರು ಏಕೋ defence ಗೆ ಹೊಟರು. May be . we don't question his intention. That House is a creation of this House. That House can cease to exist at the will of this House. ಹಾಗೆಂದು ನಾವು

ಅವರನ್ನು ಅಗೌರವವಾಗಿ ಕಾಣಬೇಕು, ತುಚ್ಛವಾಗಿ ಕಾಣಬೇಕೆಂದು ಹೇಳುತ್ತಿಲ್ಲ. ಅವರು ಸ್ವಲ್ಪ ಖಾರವಾಗಿ express ಮಾಡಿದರು. ಈ House ನ supremacy ಅನ್ನು ನಾವು guard ಮಾಡಬೇಕು. ಇಲ್ಲದೇ ಹೋದರೆ ಇದೊಂದು precedent ಆಗಿ, ಇದೇ ಮುಂದುವರೆದುಕೊಂಡು ಹೋಗುತ್ತದೆ. That cannot happen. We have to take views of our friends. ಇರಲಿ ಅವರೇನೋ protest ಮಾಡಿ ಹೋಗಿದ್ದಾರೆ. Pass ಮಾಡುವುದು, Bill merits ಗೆ ಹೋಗುವುದು, ಮಾಡಿಬಿಡಿ ಎಂದು ಹೇಳುವುದು ಬೇರೆ. ಎಲ್ಲೋ ಆತುರದಲ್ಲಿ, ಆವೇಶದಲ್ಲಿ ನಾವು ಈ ರೀತಿ ಮಾಡುತ್ತಾ ಹೋದರೆ it will not be in good taste, Sir. We will not be leaving a good precedent on record. ದಯಮಾಡಿ ಅವರ ಬಗ್ಗೆ ಸಂಪೂರ್ಣ ಗೌರವವಿದೆ. ಆ ಸದನ ನಮ್ಮ ಜೊತೆಗೆ ಇರಬೇಕು. Time to time ನಮಗೆ ಅವರ advise ಬೇಕು. ಕೆಲವು ಬಾರಿ ನಮಗೆ ತೋಚದಿರುವಂತಹ ವಿಷಯಗಳು ಅವರಿಗೆ ತೋಚಬಹುದು. That is the very idea. ಅನೇಕ ಜನ ಸಾರ್ವಜನಿಕರ ಜೀವನದಲ್ಲಿ ಇರುವವರಿಗೆ ಅವರದೇ ಆದ ಕಾರಣಗಳಿಗೆ ಚುನಾವಣೆಯಲ್ಲಿ ನೇರವಾಗಿ ಆರಿಸಿ ಬರುವುದಕ್ಕೆ ಆಗದೇ ಹೋದರೂ ಕೂಡ ಅಂತಹವರ ಅಭಿಪ್ರಾಯಕ್ಕೂ ಮಾನ್ಯತೆ ಇರಬೇಕೆಂದು ನಾವು ಆ ಸದನವನ್ನು ಇಟ್ಟುಕೊಂಡಿರುವುದು. ನಾವು ಆ ಸದನವನ್ನು ಅಲಕ್ಷ್ಯ ಮಾಡುತ್ತಿಲ್ಲ. But, kindly Sir, the views made out by our friends are very valid views. Therefore, I appeal to you, ಇದರಲ್ಲಿ ಇಜ್ಜತ್ ಏನು ಮಾಡಿಕೊಳ್ಳಬೇಡಿ. ಇದು ten minute job ಅಷ್ಟೇ. ಮಾನ್ಯ ಪ್ರಕಾಶ್‌ರವರೆ, I will suggest to you a remedy. Kindly you put somebody else in Chair. Parliamentary Affairs Minister ಬರಲಿ, Minister, Opposition Leader ಬರಲಿ, we will call those friends, ಎಲ್ಲಾ ಕುಳಿತುಕೊಂಡು ಮಾತನಾಡೋಣ. We will try to sort it out. ಮತ್ತೆ ಹಿಂದಕ್ಕೆ ಹೋಗಬೇಕು ಎಂದು ಇಲ್ಲ. See, ಒಂದು crisis precipitate ಆದಾಗ ಅದನ್ನು resolve ಮಾಡಿಕೊಂಡು ಮುಂದಕ್ಕೆ ಹೋಗಬೇಕೇ ಹೊರತು, ಎಲ್ಲಾ ಸರಿ ಇದೆ ಎಂದು ಹಾಗೇ ಹೋಗತಕ್ಕಂಥಾದ್ದು, that amounts to bulldozing. See, even if there is one dissent voice, we have a responsibility to convince that person. See, you should not do that.

ಶ್ರೀ ವೈಜನಾಥ್ ಪಾಟೀಲ್: ಈಗ upper House ಗೆ ಈ ಬಿಲ್ ಹೋಗಿ ಅದನ್ನು amendment ಮಾಡುವುದು ಅಥವಾ reject ಮಾಡುವುದಕ್ಕೆ ಅಧಿಕಾರ ಇದೆ. ಅಲ್ಲಿಂದ ಅದು ಮತ್ತೆ ವಾಪಸ್ಸು ಬರುತ್ತದೆ. ಆ ರೀತಿ ಇದು ವಾಪಸ್ಸು ಬಂದಿದೆ. ಈಗ ಪುನಃ ಆ original Bill ಏನಿತ್ತು ಅದನ್ನು pass ಮಾಡಿ ಕಳುಹಿಸಿದ ಮೇಲೆ ಅಲ್ಲಿ pass ಮಾಡಬೇಕಾಗುತ್ತದೆ. ಅವರ suggestion ಪ್ರಕಾರ ಇದನ್ನು dilute ಮಾಡುವುದಕ್ಕೆ ಹೋಗಬೇಡಿ. original Bill ಮೊದಲು ಏನು ಪಾಸ್ ಆಗಿತ್ತು, ಅದನ್ನೇ ಪಾಸ್ ಮಾಡುವುದಕ್ಕೆ ನಮ್ಮ ಒಪ್ಪಿಗೆ ಇದೆ.

ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬರ್ಗಾ):– ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಶಿಕ್ಷಣ ಸಚಿವರು ವರ್ಗಾವಣೆ ವಿಚಾರದಲ್ಲಿ ಏನು ತಿದ್ದುಪಡಿಯನ್ನು ತಂದಿದ್ದಾರೆ, ಇದು ಬಹಳ ಸಮಂಜಸವಾದುದು. ಈಗಾಗಲೇ ಕೆಲವು ಸದಸ್ಯರು, ಈ ಸದನಕ್ಕೆ ಬಹಳ ಅವಮಾನವಾಗಿದೆ, ಮೇಲ್ಮನೆ ಸದಸ್ಯರು ತಮ್ಮದೇ ಆದಂತಹ ಒಂದು Select Committee ಮಾಡಿಕೊಂಡು ಚರ್ಚೆ ಮಾಡಿರುವುದರ ಬಗ್ಗೆ ಹೇಳಿದ್ದಾರೆ. ಇದು ಸತ್ಯವಾದ ವಿಷಯವಾಗಿದೆ. ಏಕೆಂದರೆ ಯಾವುದೇ ಒಂದು ವಿಧೇಯಕದ ತಿದ್ದುಪಡಿ ವಿಚಾರ ಬಂದಾಗ ಕೇವಲ Select Committee ಮಾಡಬಾರದು. Joint Select Committee ಮಾಡುವುದರಿಂದ ಉಭಯ ಸದನಕ್ಕೇ ಗೌರವ ಬರುತ್ತದೆ. ಉಭಯ ಸದನದ ಸದಸ್ಯರುಗಳ ಮಧ್ಯೆ ಸಾಮರಸ್ಯವಿರುತ್ತದೆ. ನಮ್ಮ ಸದಸ್ಯರುಗಳು ಏನು ಹೇಳಿದರು ಅದು ಸತ್ಯವಾಗಿದೆ. ಈಗಾಗಲೇ ಈ ವಿಚಾರದಲ್ಲಿ ಮಾನ್ಯ ಶಿಕ್ಷಣ ಸಚಿವರಾದಂತಹ ಹೊರಟ್ಟಿಯವರು, "ಇದು ತಪ್ಪಾಗಿದೆ, ಅದಕ್ಕೆ ನಾನು ಸದನದ ಕ್ಷಮೆಯನ್ನು ಕೇಳುತ್ತೇನೆ, ಇದರ ಬಗ್ಗೆ Select Committee ಮಾಡುವುದಿಲ್ಲ, ಅರ್ಧ ಗಂಟೆ ಕುಳಿತುಕೊಂಡು ಚರ್ಚೆ ಮಾಡಿ ತಿದ್ದುಪಡಿಗಳ ವಿಚಾರದಲ್ಲಿ ಕೆಲವು ಸಲಹೆಗಳನ್ನು ತೆಗದುಕೊಂಡು ಜನತೆಗೆ ಒಳ್ಳೆಯದಾಗಲಿ" ಎಂದು ಅವರು ಸಮಜಾಯಿಸಿ ಹೇಳಿದ್ದಾರೆ. ಅದರ ಜೊತೆಗೆ ವಿಷಾದವನ್ನು ಕೂಡ ವ್ಯಕ್ತಪಡಿಸಿದ್ದಾರೆ. ನಾವು ಇಲ್ಲಿ ಮೂಲ ಉದ್ದೇಶವನ್ನು ನೋಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಶಿಕ್ಷಕರ ಖಾಯಂ ನೇಮಕಾತಿ ಆದಾಗ ವರ್ಗಾವಣೆ ಅನುಕೂಲವಾಗುತ್ತದೆ. ಶಿಕ್ಷಣ ಇಲಾಖೆಯಲ್ಲಿ ಮಾನ್ಯ ಸಚಿವರಿಗೆ ಮತ್ತು ಹಿರಿಯ ಅಧಿಕಾರಿಗಳಿಗೆ ವರ್ಗಾವಣೆ ಕೆಲಸ

ಎರಡು ಮೂರು ತಿಂಗಳಾಗುತ್ತದೆ. ಹೀಗಾಗಿ ಈ ತಿದ್ದುಪಡಿಯಿಂದ ಅನುಕೂಲವಾಗುತ್ತದೆ. ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಶಿಕ್ಷಕರು ಒದಗುತ್ತಾರೆ. ಈ ಹಿನ್ನೆಲೆಯಲ್ಲಿ ನಾನು ಎಲ್ಲಾ ಶಾಸಕರಿಗೆ appeal ಮಾಡುತ್ತೇನೆ. ಮಾನ್ಯ ಮಂತ್ರಿಗಳ ಮನವಿಯನ್ನು ಇದೊಂದು ಬಾರಿ ಒಪ್ಪಿಗೆ ಕೊಟ್ಟರೆ ಒಳ್ಳೆಯದು. ಆ ವಿಧೇಯಕ ಜನರ ಹಿತಾಸಕ್ತಿಗಾಗಿ ಮಾಡಿದೆ ಎಂದು ತಮ್ಮ ಮುಂದೆ ಹೇಳುತ್ತೇನೆ.

ಶ್ರೀ ಎಸ್.ರಾಜೇಂದ್ರನ್: Bill ಒಪ್ಪಿಗೆ ಕೊಡುವಂತಹ ವಿಚಾರದಲ್ಲಿ ನಾವು ಏನೂ ಹೇಳಿಲ್ಲ. ಈ ಸದನದ ಸಂಪ್ರದಾಯ ಏನಿದೆ ಅದನ್ನು ಸರಿಪಡಿಸಬೇಕು. ತಮ್ಮ ಕುರ್ಚಿಗೆ ಗೌರವ ಇರಬೇಕು. Legislators ಏನೆಂದು ಸಾವಿರ ಜನರಿಗೆ ಗೊತ್ತಾಗಿದೆ. You must give this Bill to the Joint Committee. ಅಲ್ಲಿ ಸದನದಲ್ಲಿ ಏನಾಗಿದೆ? ಅಲ್ಲಿ ಏನು ತಿದ್ದುಪಡಿ ಮಾಡಿ ಕಳುಹಿಸಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡಿ, ನಮ್ಮ ಒಪ್ಪಿಗೆಯನ್ನು ತೆಗೆದುಕೊಂಡು ತಾವು ಒಳ್ಳೆಯ ರೀತಿಯಲ್ಲಿ ಸಂಪ್ರದಾಯವನ್ನು ಕಾಪಡಬೇಕು. ಅದು ಬಿಟ್ಟು ನಾವು ಇಲ್ಲಿ ಬಿಲ್ ಅನ್ನು ಪಾಸ್ ಮಾಡಿ ಕೊಟ್ಟಿದ್ದೆವು. ಅದು ಅಲ್ಲಿ ಹೋಗಿ ತಿದ್ದುಪಡಿಯಾಗಿದೆ. ಅದನ್ನು ತಂದು ಇಲ್ಲಿ ನೀವು ಬಿಲ್ ಪಾಸ್ ಮಾಡಿ ಎಂದರೆ What is value of this House? ಅದನ್ನು ನಾವು ಕೇಳಿದ್ದು. ನಾವು ಬಿಲ್ ಬಗ್ಗೆ ಕೇಳಿಲ್ಲ. ಈ ಸದನದ ಗೌರವ, ಸಂಪ್ರದಾಯ ಏನದೆ ಅದನ್ನು maintain ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಪ್ರಕಾಶ್‌ರವರೆ ಆಗ್ಗಿಂದಾಗ್ಗೆ ಅವರ ಹಕ್ಕುಗಳ ಬಗ್ಗೆ ಮತ್ತು ಎಲ್ಲಾ ಸೌಲಭ್ಯಗಳನ್ನು ಕೊಡಬೇಕು ಎಂದು ಮತ್ತು ಇಲ್ಲಿ ಮಾಡಿದಂತಹ ವಿಚಾರಗಳ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆಯಾಗುತ್ತಿರುತ್ತದೆ. ಅದು ತಮ್ಮ ಗಮನಕ್ಕೆ ಬಂದಿರಬೇಕು. ಆದರೆ ಈ ಒಂದು ವಿಷಯದಲ್ಲಿ precedent ಆಗಬಾರದು. This should not become a precedent. ಈಗ SDMC ಹಾಗೂ ಇದೊಂದು ಈ ಎರಡೂ ಶಿಕ್ಷಣ ಇಲಾಖೆಯಲ್ಲಿ ಆಯಿತು. ಒಂದು ವೇಳೆ ಇದು ಅಲ್ಲಿ defeat ಆಗಿ ವಾಪಸ್ಸು ಬಂದಿದ್ದರೆ ಅದನ್ನು ಇಲ್ಲಿ pass ಮಾಡಬಹುದು. ಅಲ್ಲಿ ತಿದ್ದುಪಡಿಯಾಗಿ ಬಂದಾದ ಮೇಲೆ, ಅದು ಏಕೆ ತಿದ್ದುಪಡಿಯಾಯಿತು ಎಂದು ಚರ್ಚೆ

ಬೇಕಲ್ಲವೇ? ಅದರ ಬಗ್ಗೆ ಚರ್ಚೆಯಾಗದೇ ಇಲ್ಲಿ ಪಾಸ್ ಮಾಡುವುದಕ್ಕಾಗುತ್ತದೆಯೇ? ಇದು ಏಕೆ ತಿದ್ದುಪಡಿಯಾಗಿದೆ ಎಂದು ಮಾಹಿತಿಯನ್ನು ಕೊಡಿ, ನಾವು ಚರ್ಚೆ ಮಾಡುತ್ತೇವೆ, ನಂತರ ಅದರ ಬಗ್ಗೆ ಸದನ ತೀರ್ಮಾನ ತೆಗೆದುಕೊಳ್ಳಲಿ. ಇಲ್ಲದಿದ್ದರೆ ಸರಿಯಾಗುವುದಿಲ್ಲವೆಂದು ಕಾಣುತ್ತದೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾವು ಎರಡು issue ಅನ್ನು mix up ಮಾಡುವುದು ಬೇಡ. Transfer Bill ನಲ್ಲಿ ಏನು amendment ಬಂದಿದೆ, ಅವುಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ಸದನದ Supremacy ಯನ್ನು ಕಾಯ್ದುಕೊಳ್ಳುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡಬೇಕು. ಇನ್ನು ಮುಂದೆ ಈ ರೀತಿ ಆಗಲಾರದಂತೆ ಅವಕಾಶವನ್ನು ಕಲ್ಪಿಸಿಕೊಡುವುದು ಬೇಡ. ಆದರೆ Transfer ವಿಚಾರಕ್ಕೆ ಸಂಬಂಧಪಟ್ಟಂತೆ ಇರುವ Bill with amendment ಏನು ಬಂದಿದೆ, they are all good amendments . We want those amendments. ನಾವು ಅದನ್ನು ಪಾಸ್ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಹೊರಟ್ಟಿಯವರು, ಆ ದಿವಸ ನಾವು ಹೇಳಿದ್ದರಲ್ಲಿ ಒಂದು ವಿಷಯವನ್ನು ಮಾಡಿಲ್ಲ. ಅದು ಏನೆಂದರೆ, ಒಬ್ಬ ಹೆಣ್ಣು ಮಗಳು ಬೇಸಾಯಗಾರನನ್ನು ಲಗ್ನವಾಗುತ್ತಾಳೆ. ನೀವು ಗಂಡ ಹೆಂಡತಿ ಇಬ್ಬರು ನೌಕರಿಯಲ್ಲಿದ್ದರೆ ಅಷ್ಟೇ ಎಂದು ಹೇಳುತ್ತೀರಿ. ಈ ಬಗ್ಗೆ ಮಾನ್ಯ ಎಸ್.ಎಂ.ಕೃಷ್ಣರವರು ಇದ್ದಾಗಲೂ ಚರ್ಚೆಯಾಗಿದೆ. ಒಬ್ಬ ಹೆಣ್ಣು ಮಗಳು ಒಬ್ಬ ಬೇಸಾಯಗಾರನನ್ನು ಲಗ್ನವಾದರೆ, ಎಲ್ಲೋ ಒಂದು ಕಡೆ ಅವಳು ಇರುತ್ತಾಳೆ. ಅವಳು ಬೇಸಾಯಗಾರನನ್ನು ಕಿತ್ತುಕೊಂಡು ಹೋಗುವುದಿಲ್ಲ. ಅವರನ್ನು ಇಮಿಡಿಯೇಟ್ ಆಗಿ ವರ್ಗ ಮಾಡಿಕೊಡಬೇಕು. ಈಗ ರೈತರ ಮಕ್ಕಳಿಗೆ ಕನ್ಯೆಯನ್ನೇ ಕೊಡುವುದಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ನೀವು ಈ ರೀತಿ ಮಾಡುತ್ತಾ ಹೋದರೆ, ಯಾರೂ ಲಗ್ನ ಆಗುವುದಕ್ಕೆ ತಯಾರಾಗುವುದಿಲ್ಲ. ಆದುದರಿಂದ ಮೇಜರ್ ಆಗಿ ಇದನ್ನು ನೀವು ಇಡಬೇಕು. ಇಲ್ಲಿ ಬೇಸಾಯಗಾರರು ಎಲ್ಲಿರುತ್ತಾರೋ ಅಲ್ಲಿಗೆ ಅವರನ್ನು ವರ್ಗ ಮಾಡಬೇಕು. ಇಲ್ಲಿ ಜಮೀನನನು

ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ತಾವು ದಯವಿಟ್ಟು ಇದನ್ನು ಸೇರಿಸಿಕೊಳ್ಳಬೇಕು.

ಶ್ರೀ ಬಸವರಾಜ ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಏನು ಹೇಳಿದ್ದಾರೆಂದರೆ, ಸರ್ಕಾರಿ ನೌಕರರಷ್ಟೆ ಪತಿ ಪತ್ನಿ ಎನ್ನುವಂಥಾ ಭಾವನೆ ಇತ್ತು. ಅದನ್ನು ತೆಗೆದು ಎಲ್ಲರಿಗೂ ಒಂದೇ ಆಗಬೇಕೆನ್ನುವಂಥಾದ್ದನ್ನು ನಿಯಮದಲ್ಲಿ ಮುಂದೆ ಅಳವಡಿಸಿಕೊಳ್ಳುತ್ತೇವೆ. ಅವರು ಬರುವುದಿಲ್ಲವೆಂದು ಹೇಳಿದ್ದಾರೆ, ಅದನ್ನು ಮುಂದೆ ಮಾಡುತ್ತೇವೆ. ಇದರಲ್ಲಿ ಏನೂ ಇಲ್ಲ, ನಾನು ಮತ್ತೊಮ್ಮೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ನೀವು already ಮಂಡನೆ ಮಾಡಿದ್ದೀರಿ, ಹೇಳಿದ್ದೀರಿ. ನಾನು ಕೂಡ ಮಾತನಾಡಿದ್ದೇನೆ. ಇಲ್ಲಿ ಸಭೆಯನ್ನು ಬಹಳಷ್ಟು ಜನ ಸದಸ್ಯರು ಹೇಳಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರು ಮತ್ತು ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ floor learders ಇದ್ದಾರೆ. ಅವರು ಏನು ಹೇಳುತ್ತಿದ್ದಾರೆಂದರೆ, ಕೆಳಮನೆಯಲ್ಲಿ ಇದರ ಬಗ್ಗೆ ವಿಚಾರ ವಿಮರ್ಶೆಯಾಗಿಲ್ಲ, ಸಲಹೆಗಳನ್ನು ಕೊಟ್ಟಿದ್ದೇವೆ. ಇದನ್ನು ಬಿಟ್ಟು ನೀವು ಮೇಲ್ಮನೆಯಲ್ಲಿ ಮಾಡಿದ್ದೀರಲ್ಲಾ, ಅದು ತಪ್ಪು. ನೀವು ಅವರನ್ನು ಕರೆಸಿ, ಅವರಿಗೆ ಹೇಳಿ, ಮುಂದೆ ಆ ರೀತಿ ಆಗದಂತೆ, ಮಾನ್ಯ ಪ್ರಕಾಶ್‌ರವರು ಮಾಡಿದರೆ, ಸರಿಹೋಗುತ್ತದೆ. ಅವರನ್ನು ಹೊರಗಿಟ್ಟು ಇವತ್ತು ನಾವು ಮಾಡಿದರೆ ಸರಿ ಹೋಗುವುದಿಲ್ಲ. ಇಲ್ಲಿ ಬಿಲ್‌ಗಳ ಬಗ್ಗೆ ಇಲ್ಲ, ಡಾ: ಶರಣ ಪ್ರಕಾಶ್ ಆರ್. ಪಾಟೀಲ್‌ರವರು ಹೇಳಿದ್ದಾರೆ. ಮಾನ್ಯ ಡಿ.ಆರ್.ಪಾಟೀಲ್‌ರವರು ಮತ್ತು ಮಾನ್ಯ ಬಸವರಾಜ ರಾಯರೆಡ್ಡಿಯವರು ತಮ್ಮ ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಒಟ್ಟಾರೆ ಏನೆಂದರೆ, ಇದನ್ನು ignore ಮಾಡುವುದು ಬೇಡ, ಮಾನ್ಯ ಅಧ್ಯಕ್ಷರೆ, ಇಲ್ಲಿ ತಮ್ಮ ಘನತೆ, ಗೌರವದ ಪ್ರಶ್ನೆ ಇದೆ. ತಾವು ಸುಮ್ಮನೆ ಕುಳಿತು ಬಿಟ್ಟಿದ್ದೀರಿ, ತಾವು ಆದೇಶವನ್ನು ಕೊಡುತ್ತಿಲ್ಲ. ಇಲ್ಲಿ ಬಿಟ್ಟು ಅಲ್ಲಿ ಹೇಗೆ ಆಯಿತು? ಅಲ್ಲಿ ಆದ ಮೇಲೆ ಇಲ್ಲಿ ಪಾಸು ಮಾಡಬೇಕಾ? ಇಲ್ಲಿ ಆಗಿದ್ದು ಅಲ್ಲಿ ಪಾಸು ಮಾಡಬೇಕಾ?

ಅಧ್ಯಕ್ಷರು : ಚರ್ಚೆ ನಡೆಯುತ್ತಿದೆಯಲ್ಲಾ? ಅವರವರ ಅಭಿಪ್ರಾಯಗಳನ್ನು ಹೇಳುತ್ತಿದ್ದಾರಲ್ಲಾ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ಹೇಳಿದಂತೆ ಒಂದು ಭಿನ್ನಾಭಿಪ್ರಾಯ ಬರುವಂಥಾದ್ದು ಹಿಂದೆ ಕೂಡ, ಹಿಂದಿನ ನಮ್ಮ ಕಾನೂನು ಸಚಿವರು ಕೆಲವು ವಿಧೇಯಕಗಳನ್ನು ವಿಧಾನ ಪರಿಷತ್ತಿನಲ್ಲಿ ಮಂಡನೆ ಮಾಡಿ, ನಂತರ ಇಲ್ಲಿ ಮಂಡನೆ ಮಾಡಿದ ವಿಚಾರದಲ್ಲಿಯೂ ಕೂಡ ತಾವು ಸ್ಪೀಕರ್ ಆದಂಥ ಸಂದರ್ಭದಲ್ಲಿ, ಮಾನ್ಯ ನಾಣಯ್ಯನವರು ಅಲ್ಲಿ ವಿಧೇಯಕಗಳನ್ನು ಮಂಡಿಸಿದರು. ಇದು ಸರಿಯಾದುದಲ್ಲ, ಎಲ್ಲಾ ವಿಧೇಯಕಗಳು ಕೂಡ, it should be originated here only, from the lower House. Then only it has to be sent there ಎನ್ನುವಂಥ ವಾದ ವಿವಾದಗಳು ನಡೆದಾಗ, ತಾವೇ ಆ ಸಂದರ್ಭದಲ್ಲಿ ಮಾರ್ಗದರ್ಶನ ಮಾಡಿದ್ದೀರಿ. ಹಣಕಾಸಿನ ವಿಧೇಯಕಗಳನ್ನು ಬಿಟ್ಟರೆ, ಉಳಿದಿರುವಂಥಾದ್ದು ಅಲ್ಲಿಯೂ ಕೂಡ ವಿಧೇಯಕಗಳನ್ನು ಮಂಡಿಸಬಹುದು. ಇಲ್ಲಿಯೂ ಕೂಡ ವಿಧೇಯಕಗಳನ್ನು ಮಂಡಿಸಬಹುದು. ಇದರ ಬಗ್ಗೆ ಇಲ್ಲಿ ಭೇರೆ ಸದನದ ಬಗ್ಗೆ ಚರ್ಚೆ ಮಾಡುವಂಥ ಅಗತ್ಯವಿಲ್ಲವೆನ್ನುವಂಥಾದ್ದನ್ನು ಮಾನ್ಯ ರಮೇಶ್ ಕುಮಾರರವರು ಇದ್ದಾಗಲೂ ಕೂಡ ಮಾರ್ಗದರ್ಶನವನ್ನು ಮಾಡಿದರು ಇಲ್ಲಿ ಬಂದಿರುವ ವಿವಾದ ಯಾವುದೆಂದರೆ, ಅಲ್ಲಿ ಒಂದು ಕಮಿಟಿ ಎನ್ನುವಂಥಾದ್ದನ್ನು ಮಾಡಿ, ಇಲ್ಲಿ ಕೆಳಮನೆಯ ಸದಸ್ಯರುಗಳನ್ನು ಸೇರಿಸದೇ ಅಲ್ಲಿ ಒಪ್ಪಿತವಾದಂಥ ತಿದ್ದುಪಡಿಯನ್ನು ಇಲ್ಲಿ ತಂದಾಗ, ಇದು ಒಂದು ಕೆಟ್ಟ ಸಂಪ್ರದಾಯ ಆಗುತ್ತದೆ ಮತ್ತು ಈ ಸದನಕ್ಕೆ ಅಗೌರವವಾಗುತ್ತದೆಂಬ ವಾದವಿದೆ. ಸದನದಲ್ಲಿ ಶಿಕ್ಷಕ ಪ್ರತಿನಿಧಿಗಳಾಗಿರುವಂಥವರು ಕೂಡ ಇರುತ್ತಾರೆ. ಆ ಕಾರಣಕ್ಕಾಗಿ ಒಂದು ವಿಚಾರವನ್ನು ಯೋಚನೆ ಮಾಡುವುದಾದರೆ, ಅವರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ ಮತ್ತು ಕ್ಷಮೆ ಕೇಳಿದ್ದಾರೆ. ಅದು ಮುಂದೆ ಉದಾಹರಿಸಬಹುದಾಗಿರತಕ್ಕಂಥ ಪ್ರಕರಣವಲ್ಲ. ಅದನ್ನು ಉದಾಸೀನಗೊಳಿಸಬಹುದೆಂಬ ರೀತಿಯಲ್ಲಿ ಅದೇ ಅಭಿಪ್ರಾಯ ಇದಾಗಿದೆ. ಇಲ್ಲಿ ಪ್ರತಿಷ್ಠೆಯ ಪ್ರಶ್ನೆಯಾಗಬಾರದು. ಈ ವಿಧೇಯಕದಲ್ಲಿರುವಂಥ ವಿಷಯಗಳ ಬಗ್ಗೆ ಎಲ್ಲರಿಗೂ ಕೂಡ ಸದ್ಭಾವನೆ ಇದೆ, ಸಹಮತವಿದೆ. ಆದುದರಿಂದ ಇದನ್ನು ಒಂದು ಉದಾಹರಿಸಬಹುದಾದಂಥ ಒಂದು ಉದಾಹರಣೆಯೆಂದು ಭಾವಿಸಿಕೊಳ್ಳದೇ, ಇದು ಒಂದು ಸಣ್ಣದಾಗಿರುವಂಥ ತಿದ್ದುಪಡಿ, ಆ ಕಾರಣಕ್ಕಾಗಿ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಏನು ವಿಷಯವನ್ನು ತಿಳಿಸಿದ್ದೀರಿ

ಎನ್ನುವ ಬಗ್ಗೆ ನಮ್ಮ ಮುಖಂಡರುಗಳನ್ನು ಹೊರಗಿಟ್ಟು, ಈ ಚರ್ಚೆಯನ್ನು ಮಾಡಿ bulldoze ಮಾಡಿ ತೆಗೆದುಕೊಂಡು ಹೋಗಬೇಕೆನ್ನುವ ಪ್ರಶ್ನೆ ಇಲ್ಲ. ಅವರನ್ನು ಕೂಡ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಅವರು ಬಂದು ಸಹಕರಿಸಿದರೆ ತುಂಬಾ ಸಂತೋಷ. ಆದರೆ ಈ ಸಂದರ್ಭದಲ್ಲಿ ತಾವು ಏನು ಅವರನ್ನು ಕರೆಸುವಂಥಾದ್ದು ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆಂಬುದು ಗೊತ್ತಿಲ್ಲ. ಈ ವಿಚಾರದಲ್ಲಿ ಇನ್ನು ಚರ್ಚೆಮಾಡುವ ಅವಕಾಶವಿದೆಯೆಂದು ಆದರೆ, ಚರ್ಚೆ ಮಾಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ತಾವು ಹೇಳಿದ್ದನ್ನು ನಾನು ಸಮರ್ಥಿಸುತ್ತೇನೆ. ನಾನು ಏನು ಹೇಳುತ್ತೇನೆಂದರೆ, kindly go through the Rules of procedure and conduct of business of this House and also that House. Now when we have to pass a Bill, legislate ಮಾಡಬೇಕಾಗಿದ್ದರೆ, if the Bill is originated either here or there, it is taken up for consideration and then the Hon'ble Members give their opinion and ultimately, the Bill is passed .whenever there is an opinion that emerges out of the discussion that the Bill needs to be referred to a Committee , it is invariably a joint Select Committee. There is nothing like unilaterally a Committee of one House being constituted and the Bill being referred to that Committee and subsequently the Bill being passed. It becomes null and void. It touches the very privilege of this House, or any of the Houses for that matter. The question here is, it was referred to a Committee there, a Committee that did not Consist of any representative of this House and a situation has now arisen where this House will have to give its consent to the passing of the Bill, which is ultra vires, which is not in comformity with the very rules of this House.

SRI.M.P.PRAKASH: I do agree. Automatically, will not become null and void. But, of course, it is a violation of the Rules we ourselves have framed and we have also given an authority to the Speaker. He is the reservoir of all powers. Under a circumstance, which has been explained by our Hon'ble Minister, taking into consideration, the mood of the House, the Speaker can set aside all those things also and it need not necessarily be quoted that it is going to be a precedent, ಆ ಕಾರಣಕ್ಕಾಗಿ ಇದು ಒಂದು ಉದಾಹರಿಸಬಹುದಾಗಿರುವಂಥಾ ಪ್ರಕರಣವಾಗದಂತೆ, ತಮಗೆ ಅಂತರ್ಗತವಾಗಿರುವಂಥ ಅಧಿಕಾರದ ಮೂಲಕ ಆಗಿರುವಂಥ ಅಚಾತುರ್ಯಕ್ಕೆ ಕ್ಷಮೆ ಕೇಳಿದಂಥ ಮತ್ತು ತಿದ್ದುಪಡಿಯ ಸದುದ್ದೇಶದ ಬಗ್ಗೆ ಇಡೀ ಸದನವೂ ಒಪ್ಪಿರುವಂಥ ಹಿನ್ನೆಲೆಯಲ್ಲಿ ತಾವು ಹೇಳಿದಂಥ ಮಾತಿಗೆ ಅದು null and void ಆಗುವುದಿಲ್ಲ. ಅದು ನಿಜ, Joint Select Committee ಆಗಬಹುದು. ಅದು ಸಣ್ಣದೆ ಆಗಿರಬಹುದು, ದೊಡ್ಡದೆ ಆಗಿರಬಹುದು. ಅದನ್ನು ಕರೆಯಬೇಕು, ಆದರೆ ತಾವು ಅದನ್ನು ಬದಿಗೊತ್ತಿ, ಈಗ ಇದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ತಾವು ಬೇರೆಯವರನ್ನು ಆ ಪೀಠದಲ್ಲಿ ಕೂರಿಸಿ, see, you yourself have suggested now.

SRI K.R.RAMESH KUMAR : With due respect to you, while agreeing with you, the magnitude and the volume of the residual powers of Hon'ble Speaker enjoys, the Speaker also has certain limitations.

SRI M.P.PRAKASH : Every right and every power is controlled by its checks and balances.

SRI K.R.RAMESH KUMAR : He shall not use this residual power on an issue which touches upon the privilege of this House, which questions the very existence of this House. That should not happen. Sir, I appeal to you the extension of usage of

residual power can't be taken that farther. That is my humble submission and I leave it to the discretion of the Chair.

ಶ್ರೀ ಎಂ.ಪಿ. ಪ್ರಕಾಶ್: ಈಗ ಪ್ರತಿಯೊಂದು ಕಾನೂನಿನಲ್ಲಿ ಕೂಡ Removal of distress clauses ಎಂದು ಇಟ್ಟುಕೊಂಡಿರುತ್ತೇವೆ. General Clauses Act ಎಂದು ಇಟ್ಟುಕೊಂಡಿರುತ್ತೇವೆ, may or shall ಎಂದು ಯಾವಾಗ ಓದಬೇಕು ಎಂದು ಇಟ್ಟುಕೊಳ್ಳುತ್ತೇವೆ. shall ಅನ್ನು may ಎಂದು ಯಾವಾಗ consider ಮಾಡಬೇಕೆಂದು ಕೂಡ General Clauses Act ಅನ್ನು ನಾವು invoke ಮಾಡುತ್ತಿರುತ್ತೇವೆ. ಆ ಸಂದರ್ಭದಲ್ಲಿ ತಾವು ಹೇಳಿದಂತೆ ತಮ್ಮ ಮಾತಿಗೆ ಸಂಪೂರ್ಣವಾದ ಗೌರವವಿದೆ. ಇಲ್ಲಿ ಆಗಿರುವಂಥಾದ್ದು ಅಚಾತುರ್ಯವೆಂದು ಕ್ಷಮೆಯನ್ನು ಕೇಳಿದ್ದಾರೆ. ಆದರೆ ಇದು ಬಹಳ draconian ಕಾನೂನು, ಇದಕ್ಕೆ ಸಹಮತವಿಲ್ಲವೆಂದು ಸದನ ಹೇಳಿಲ್ಲ. ಇಲ್ಲಿರುವಂಥ ವಿಚಾರಗಳೆಲ್ಲವನ್ನು ಅವರು ಅಳವಡಿಸಿಕೊಂಡಿದ್ದಾರೆ. ಆ ಕಾರಣಕ್ಕಾಗಿ ತಾವು ಒಪ್ಪುವುದಾದರೆ, ತಮ್ಮ ಪೀಠದಲ್ಲಿ ಮಾನ್ಯ ಉಪಾಧ್ಯಕ್ಷರನ್ನೋ ಅಥವಾ ಮತ್ತೊಬ್ಬರನ್ನೋ ಕೂರಿಸಿದರೆ, ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ಬರಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಮಾನ್ಯ ಉಪಾಧ್ಯಕ್ಷರು ಇದ್ದಾರೆ, ಅವರನ್ನು ಕೂರಿಸಿ, ನಾನು ಅವರನ್ನು ಕೇಳಿಕೊಳ್ಳುತ್ತೇನೆ, ಅವರು ಒಂದು ವೇಳೆ ಒಪ್ಪದೇ ಹೋದರೂ, ಅವರು ಒಪ್ಪುವಂತೆ ನಾವು ಪ್ರಯತ್ನವನ್ನು ಮಾಡೋಣ, then let us see what happens, you may kindly do it. ನಾನು ಅವರನ್ನು ಮಾತನಾಡಿಸುತ್ತೇನೆ. OK, we agree on that.

ಶ್ರೀ ಧರ್ಮಸಿಂಗ್:– ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಎಲ್ಲಾ ಬಿಸಿನೆಸ್ ಮುಗಿಯಬೇಕಲ್ಲಾ? ನಿಯಮ 69 ಇದೆ, ನಾವು ಮತ್ತು ಮಾನ್ಯ ಬಿ.ಆರ್ ಪಾಟೀಲ್‌ರವರು ಡಾ:ಡಿ.ಎಂ.ನಂಜುಂಡಪ್ಪನವರ ವರದಿಯ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ಇದು ಅರ್ಧ ಗಂಟೆ discussion ಆಗಲಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು ಗಂಟೆ ಕಾಲ ಮಾತನಾಡೋಣ.